# ಪ್ರಸ್ತಾವನೆ

## (1 ಸಮುವೇಲ 16)

ಒಂದು ಭಾನುವಾರ ಬೆಳಿಗ್ಗೆ, ಮೇ 12, 1974, ನನ್ನ ಕುಟುಂಬ ಮತ್ತು ನಾನು ಇಟಲಿಯ ಫ್ಲೋರೆನ್ಸ್‌ನ, ಲಾರ್ಡ್ಸ್ ಚರ್ಚ್‌ನಲ್ಲಿ ಆರಾಧಿಸಿದೆವು. ಆರಾಧನೆ ಮುಗಿದ ತಕ್ಷಣ, ಫ್ಲೋರೆನ್ಸ್‌ನಲ್ಲಿ ಮಿಷನರಿಯಾಗಿ ಸೇವೆ ಸಲ್ಲಿಸುತ್ತಿದ್ದ ಅರ್ಲ್ ಎಡ್ವರ್ಡ್ಸ್, ತಮ್ಮ ವಾಹನದಲ್ಲಿ ಅವಸರದಿಂದ ಕರೆದುಕೊಂಡು ಹೋದರು. ಬಹು ವೇಗವಾಗಿ ವಾಹನ ಚಲಾಯಿಸುತ್ತಿರುವಾಗ, ಅವರು ಹೀಗೆ ವಿವರಿಸಿದರು, “ವಸ್ತು ಸಂಗ್ರಹಾಲಯವು ಎರಡು ಗಂಟೆಗೆ ಮುಚ್ಚಲ್ಪಡುತ್ತದೆ, ಮತ್ತು ಅದು ಸೋಮವಾರ ತೆರೆದಿರುವದಿಲ್ಲ - ಮತ್ತು ನೀವು ಮಂಗಳವಾರ ಇಲ್ಲಿ ಇರುವದಿಲ್ಲ!” ದೇವರ ಕೃಪೆಯಿಂದ, ನಾವು ಯಾವ ದುರ್ಘಟನೆಯಿಲ್ಲದೇ ಗಲ್ಲೆರಿಯ ಡೆಲ್ ಅಕಾಡೆಮಿಯನ್ನು ತಲುಪಿದೆವು.

ಒಳಗಡೆ, ನಾವು ನಡೆದು ಹೋಗುವಾಗ ಸಭಾಂಗಣವು ಮೈಕೆಲೆಂಜೆಲೋರವರ ಅರ್ಧಮುಗಿದ ಮೂರ್ತಿಗಳಿಂದ ತುಂಬಿತ್ತು. ಗಟ್ಟಿಯಾದ ಕಲ್ಲುಗಳಿಂದ ಆಕಾರಗಳನ್ನು ಕೆತ್ತುವ ಕಾರ್ಯವಿಧಾನವು ನನ್ನನ್ನು ಚಕಿತಗೊಳಿಸಿತು. ನಂತರ ನಾವು ಒಂದು ದೊಡ್ಡ ಕೋಣೆ ಯನ್ನು ಪ್ರವೇಶಿಸಿದೆವು. ಮೈಕೆಲೆಂಜೆಲೋರವರ ಅತ್ಯುನ್ನತ ಕೆಲಸವೆಂದು ಅನೇಕರಿಂದ ಪರಿಗಣಿಸಲ್ಪಡುವ, ಹದಿನಾಲ್ಕು ಅಡಿ ಎತ್ತರದ ಬೃಹದಾಕಾರದ ಪ್ರತಿಮೆ ನಮ್ಮ ಎದುರಿಗಿತ್ತು: *ದಾವಿದನ* ಪ್ರತಿಮೆ.

ಚಿಕ್ಕ ದಾವೀದನು, ತನ್ನ ವೈರಿಯನ್ನು ಎದುರಿಸುತ್ತಿರುವ ಪ್ರತಿಮೆ. ಅವನ ಹುಬ್ಬು ಗಳು ಗಂಟಿಕ್ಕಿದ್ದವು, ಅವನ ಭಾವುಕ ಕಣ್ಣುಗಳು ತನ್ನ ವೈರಿಯ ಮೇಲೆ ನೆಲೆಗೊಂಡಿದ್ದವು. ಕವಣೆಯು ಅವನ ಭುಜದ ಮೇಲೆ ತೂಗುತ್ತಿತ್ತು. ಅವನ ದೇಹವು ಬಿಗಿಯಾಗಿತ್ತು. ಆದರೆ ಕಳವಳದಿಂದಲ್ಲ, ಕಾರ್ಯಕ್ಕೆ ಸಿದ್ಧವಾಗಿತ್ತು. ಜಯವು ದೊರೆಯುವದರಲ್ಲಿ ಯಾವ ಸಂದೇಹ ವಿರಲಿಲ್ಲ. ಪ್ರತಿಮೆಯನ್ನು ಕೆತ್ತಿದವನ ನೈಪ್ಯಣ್ಯವು ಎಷ್ಟಿತ್ತೆಂದರೆ, ಪ್ರತಿಮೆಯ ಎದೆಯು ಉಸುರಿನಿಂದ ಉಬ್ಬಿಕೊಂಡು, ತುಟಿಗಳು ನಂಬಿಕೆಯ ಮಾತುಗಳ ನ್ನಾಡುವಂತೆ ತೋರು ತ್ತಿತ್ತು: “ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ; ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧ ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ. ಯುದ್ಧ ಫಲವು ಯೆಹೋವನ ಕೈಯಲ್ಲಿದೆ. ಆತನು ನಿಮ್ಮನ್ನು ನಮ್ಮ ಕೈಗೆ ಒಪ್ಪಿಸಿಕೊಡುವನು” (1 ಸಮುವೇಲ 17:45, 47). ಅರ್ಲ್ ಎಡ್ವರ್ಡ್ಸ್‌ರವರು ನಮ್ಮನ್ನು ವಸ್ತು ಸಂಗ್ರಹಾಲಯಕ್ಕೆ ಅವಸರದಿಂದ ಕರೆ ದುಕೊಡು ಹೋದರು, ಯಾಕೆಂದರೆ ಫ್ಲೋರೆನ್ಸ್‌ನ ಪ್ರಯಾಣವು *ದಾವೀದನನ್ನು* ನೋಡದೇ ಪರಿಪೂರ್ಣವಾಗುದಿಲ್ಲವೆಂದು ಅವರಿಗೆ ತಿಳಿದಿತ್ತು.

ಆ ಪ್ರತಿಮೆಯ ಎಷ್ಟೇ ಅದ್ಭುತವಾಗಿದ್ದರೂ, “ದಾವೀದ”ನ ವಿಷಯದ ಎದುರು ಕ್ಷೀಣ ವಾಗುತ್ತದೆ: ಅವನೊಬ್ಬ ಬಹು ಪ್ರಾಮುಖ್ಯ ವ್ಯಕ್ತಿಯಾಗಿದ್ದನು - ಹಳೇ ಒಡಂಬಡಿಕೆಯಲ್ಲಿ ಅರವತ್ತಾರು ಅಧ್ಯಯಗಳು ಅವನ ಕತೆಯನ್ನು ಹೇಳಲು ಬೇಕಾದವು, ಹೊಸ ಒಡಂಬಡಿಕೆಯಲ್ಲಿ ಐವತ್ತೊಂಬತ್ತು ಬಾರಿ ನಮೂದಿಸಲ್ಪಟ್ಟಿದ್ದಾನೆ, ಸತ್ಯವೇದದಲ್ಲಿ “ದೇವರ ಹೃದಯಕ್ಕೆ ಮನುಷ್ಯನೆಂದು” ಕರೆಯಲ್ಪಟ್ಟ ಒಬ್ಬನೇ ವ್ಯಕ್ತಿ.

1 ಸಮುವೇಲ 13:14ರಲ್ಲಿ, ಸೌಲನ ಅರಸನಾಗಿ ತಿರಸ್ಕರಿಲ್ಪಟ್ಟ ನಂತರ ಸಮುವೇಲನು, "ಈಗಲಾದರೋ ನಿನ್ನ ಅರಸುತನವು ನಿಲ್ಲುವದಿಲ್ಲ. *ಆತನು ತನಗೆ* ಒಪ್ಪುವ *ಬೇರೊಬ್ಬ ಪುರುಷನನ್ನು* ತನ್ನ ಪ್ರಜೆಯ ಮೇಲೆ ಪ್ರಭುವಾಗಿ ನೇಮಿಸಿದ್ದಾನೆ" ಎಂದನು. (ಒತ್ತಿ ಹೇಳಿದ್ದು ನನ್ನದು.) ಅಪೋಸ್ತಲ ಕೃತ್ಯ 13ರಲ್ಲಿ, ಪೌಲನು ಪಿಸಿದ್ಯ ಸೀಮೆಯ ಅಂತಿಯೋಕ್ಯದ ಸಭಾಮಂದಿರದಲ್ಲಿ ಮಾತನಾಡುವಾಗ, ಸೌಲನ ಕುರಿತು: "ಆಮೇಲೆ ದೇವರು ಅವನನ್ನು ತೆಗೆದುಹಾಕಿ ದಾವೀದನನ್ನು ಅವರ ಮೇಲೆ ಅರಸನನ್ನಾಗಿ ಮಾಡಿ - ಇಷಯನ ಮಗನಾದ ದಾವೀದನು ನನಗೆ ಸಿಕ್ಕಿದನು, ಅವನು ನನಗೆ ಒಪ್ಪುವ ಮನುಷ್ಯನು, ಅವನು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವನು ಎಂಬುದಾಗಿ ಅವನ ವಿಷಯದಲ್ಲಿ ಸಾಕ್ಷಿ ಹೇಳಿದನು" ಎಂದು ನುಡಿದನು (ವಚನ 22; ಒತ್ತಿ ಹೇಳಿದ್ದು ನನ್ನದು).

ದಾವೀದನ ಜೀವಿತದ ಕುರಿತ ಅಧ್ಯಾಯಗಳು ಅವನ *ಹೃದಯಕ್ಕಿಂತ ಇತಿಹಾಸದ* ಮೇಲೆ ಹೆಚ್ಚು ಕೇಂದ್ರಿತವಾಗಿಲ್ಲ.

"ದೇವರ ಹೃದಯಕ್ಕೊಪ್ಪುವ ಮನುಷ್ಯ" ಎಂದರೇನು? ಈ ಪದವು ಪರಿಪೂರ್ಣತೆಯನ್ನು ಸೂಚಿಸುತ್ತದೋ? ಇಲ್ಲ. ದಾವೀದನು ವಸ್ತು ಸಂಗ್ರಹಾಲಯದಲ್ಲಿನ ಸಂಗಮವರಿ ಕಲ್ಲಿನ ಭಕ್ತನಾಗಿರಲಿಲ್ಲ. ಬಿಸಿ ರಕ್ತ ಅವನ ನರನಾಡಿಗಳಲ್ಲಿ, ಬಲವಾದ ಭಾವೋದ್ವೇಗ ಅವನ ದೇಹದಲ್ಲಿ ಹರಿಯುತ್ತಿತ್ತು. ದಾವೀದನು ಇತರರು ಹಾರುವದಕ್ಕಿಂತ ಹೆಚ್ಚು ಎತ್ತರದಲ್ಲಿ ಹಾರಿದನು; ಆದರೆ ಅವನು ಹೆಚ್ಚು ಬಲವಾಗಿ ಬಿದ್ದನು.

ಈ ಪದದ ಅರ್ಥವು - ದೇವರ ಹೃದಯದೊಂದಿಗೆ ಒಬ್ಬನ ಹೃದಯವು ಸಾಮರಸ್ಯದಿಂದಿರುವದು. ಇಂದು ನಾವು ಅದೇ ಭಾವವನ್ನು ಉಪಯೋಗಿಸುತ್ತೇವೆ: "ನನ್ನ ಹೃದಯಕ್ಕೆ ಒಪ್ಪುವ ವ್ಯಕ್ತಿ ಅಲ್ಲಿ ಹೋಗುತ್ತಿದ್ದಾನೆ." ಅದರ ಅರ್ಥ, "ಆ ವ್ಯಕ್ತಿ ನಾನು *ಅನುಭವಿಸುವಂತೆ* ಅನುಭವಿಸುತ್ತಾನೆ." ನಾವು ಬಹು ಬಲವಾಗಿ ಅನುಭವಿಸುವ ವಿಷಯದ ಕುರಿತು ನಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇವೆ.

ದಾವೀದನ ಜೀವನವನ್ನು ಪರಿಶೀಲಿಸುವಾಗ, ಅವನ ಒಳ್ಳೆ ದಿನಗಳನ್ನು ಮತ್ತು ಕೆಟ್ಟ ದಿನಗಳನ್ನು ಅಧ್ಯಯನ ಮಾಡೋಣ; ಅವನ ಮೇಲು ಮತ್ತು ಕಳೆಗುಂದುವಿಕೆಯನ್ನೂ ಗಮನಿಸೋಣ. ದಾವೀದನು ತನ್ನ ಉತ್ತಮ ಸ್ಥಿತಿಯಲ್ಲಿದ್ದರೂ, ಕೆಟ್ಟ ಸ್ಥಿತಿಯಲ್ಲಿದ್ದರೂ ಅವನ ನಿಷ್ಠೆಯು ಯಾವಾಗಲೂ ಕರ್ತನ ಕಡೆಗಿತ್ತು. ಜೀವನದ ತೂಫಾನುಗಳಿಂದ ದಾವೀದನ ಆತ್ಮಿಕ ದಿಕ್ಸೂಚಿ ಅಲುಗಾಡಿದರೂ, ಕೋಲಾಹಲವು ತೀರಿದ ತರುವಾಯ, ದಾವೀದನ ದಿಕ್ಸೂಚಿಯು ಅವನ ಆತ್ಮಿಕ ಧ್ರುವದ ಕಡೆಗೇ - ಅವನ ದೇವರ ಕಡೆಗೆ, ಸೂಚಿಸುತ್ತಿತ್ತು.

ನಾವು ಹೇಗೆ "ದೇವರ ಹೃದಯಕ್ಕೆ ಒಪ್ಪುವ ಪುರುಷ ಅಥವಾ ಸ್ತ್ರೀ" ಆಗಬಹುದು? ದಾವೀದನು ಸುಮಾರು ಮೂವತ್ತು ಅಥವಾ ನಲ್ವತ್ತು ವರ್ಷದವನಾಗಿ ಒಂದು ಬೆಳಗ್ಗೆ, "ದೇವರ ಹೃದಯಕ್ಕೆ ಒಪ್ಪುವ ಮನುಷ್ಯನಾಗಿ" ಎದ್ದನೋ? ಇಲ್ಲ, ಅವನು ದೇವರ ಹೃದಯಕ್ಕೆ ಒಪ್ಪುವ ಮನುಷ್ಯನಾಗಿರುವದಕ್ಕೆ ಮೊದಲ ಕಾರಣ, ಅವನು ದೇವರ ಹೃದಯಕ್ಕೆ ಒಪ್ಪುವ *ಬಾಲಕನಾಗಿದ್ದನು.* ದಾವೀದನು ಅರಸನಾಗುವದಕ್ಕಿಂತ ಎಷ್ಟೋ ವರ್ಷಗಳ ಮುಂಚೆಯೇ ಅವನು ತನ್ನ ಹೃದಯವನ್ನು ದೇವರ ಹೃದಯದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದನು.

"ತನಗೆ ಒಪ್ಪುವ ಬೇರೊಬ್ಬ ಪುರುಷನನ್ನು ತನ್ನ ಪ್ರಜೆಯ ಮೇಲೆ ಪ್ರಭುವಾಗಿ ನೇಮಿಸಿದ್ದಾನೆ" (1 ಸಮುವೇಲ 13:14) ಎಂದು ಸಮುವೇಲನು ನುಡಿದಾಗ ಸೌಲನು ತನ್ನ ಆಳ್ವಿಕೆಯನ್ನು ಅಗತಾನೇ ಪ್ರಾರಂಭಿಸಿದ್ದನು. ದಾವೀದನು ಬಹುಶಃ ಇನ್ನೂ ಜನಿಸಿರಲಿಲ್ಲವೇನೋ, ಅಥವಾ ಜನಿಸಿದ್ದರೂ, ಅವನು ಇನ್ನೂ ಚಿಕ್ಕ ಬಾಲಕನಾಗಿದ್ದನು.[1] ಅನೇಕ ವರ್ಷಗಳ ತರುವಾಯ ಸೌಲನು ಎರಡನೇ ಬಾರಿ ಅರಸೊತ್ತಿಗೆಯಿಂದ ತಳ್ಳಲ್ಪಟ್ಟಾಗ, ಸಮುವೇಲನು, "ಯೆಹೋವನು ಈ ಹೊತ್ತು ಇಸ್ರಾಯೇಲ್ ರಾಜ್ಯವನ್ನು ನಿನ್ನಿಂದ ಕಿತ್ತು ನಿನಗಿಂತ ಉತ್ತಮನಾದ ಇನ್ನೊಬ್ಬನಿಗೆ

ಕೊಟ್ಟಿದ್ದಾನೆ" ಎಂದನು (1 ಸಮುವೇಲ 15:28). "ಇನ್ನೊಬ್ಬನು" ಎಂದು ಹೇಳುವಾಗ ದಾವೀದನನ್ನು ಸೂಚಿಸಿತು (1 ಸಮುವೇಲ 28:17), ಆದರೆ ದಾವೀದನು ಇನ್ನೂ ಪ್ರೌಢನಾಗಿರಲಿಲ್ಲ. ಅವನು ಇನ್ನೂ ತನ್ನ ತಂದೆಯ ಕುರಿಗಳನ್ನು ಮೆಯಿಸುವ ಬಾಲಕನಾಗಿದ್ದನು. ಆದರೆ, ಅವನು ಈಗಾಗಲೇ, ದೇವರ ವಾಕ್ಯದಲ್ಲಿನ ಎದ್ದು ಕಣುವ ಉತ್ತಮ ವ್ಯಕ್ತಿಯಾಗುವಂತೆ, ಆ ಗುಣಗಳನ್ನು ಬೆಳೆಸಿಕೊಳ್ಳತೊಡಗಿದನು.

ದಾವೀದನ ಕುರಿತ ಅಧ್ಯಯನವನ್ನು ನಾವು ಪ್ರಾರಂಭಿಸಿ, ಅವನು "ದೇವರ ಹೃದಯಕ್ಕೆ ಒಪ್ಪುವ ಮನುಷ್ಯನೆಂದು" ಹೇಗೆ ವ್ಯಕ್ತನಾದ ಎಂದು ನೋಡುವ.

## ನಡೆಯಲು ಕಲಿತ ಒಬ್ಬ ಮಗ

ದಾವೀದನು ಯೆಹೂದದ ಕುಲದಿಂದ ಬಂದನು. ಯಾಕೋಬನ ಪಿತೃತ್ವದ ಆಶೀರ್ವಾದದಲ್ಲಿ, ಯೆಹೂದವು ರಾಜ ಕುಲವೆಂದು ಕರೆಯಲಾಗಿದೆ (ಆದಿಕಾಂಡ 49:8-12), ಇಲ್ಲಿಯವರೆಗೆ, ಈ ಕುಲವು ತನ್ನನ್ನು ತೋರ್ಪಡಿಸಲು ಬಹು ಅಲ್ಪ ಕಾರ್ಯಗಳನ್ನು ಮಾಡಿತ್ತು.

ದಾವೀದನ ಹಿನ್ನಲೆಯು ರೂತಳ ಸುಂದರವಾದ ಚಿಕ್ಕ ಪುಸ್ತಕದಲ್ಲಿದೆ. ರೂತಳು ಒಬ್ಬ ಮೋವಾಬ್ಯಳು ಅವಳ ಪತಿ ತೀರಿಹೋಗಿದ್ದನು; ತನ್ನ ಅತ್ತೆ ನವೋಮಿಯೊಂದಿಗೆ ಅವಳು ಯೆಹೂದಕ್ಕೆ ಬಂದಳು. ಈ ಪುಸ್ತಕವು ರೂತ ಮತ್ತು ನವೋಮಿಯ ಪ್ರೇಮ ಕತೆಯನ್ನು ತಿಳಿಸುತ್ತದೆ. ರೂತ ಮತ್ತು ಬೋವಜ ಮದುವೆಯಾದ ನಂತರ ಒಬ್ಬ ಮಗನನ್ನು ಪಡೆದರು. ಸ್ತ್ರೀಯರೆಲ್ಲರೂ ಸುತ್ತಲೂ ಸೇರಿ ಬಂದಾಗ ನವೋಮಿಯು ಮಗುವನ್ನು ತನ್ನ ಉಡಿಯಲ್ಲಿ ತೆಗೆದುಕೊಂಡಳು. "ನೆರೆಹೊರೆಯ ಹೆಂಗಸರು ನವೋಮಿಗೆ ಒಬ್ಬ ಮಗನು ಹುಟ್ಟಿದ್ದಾನೆಂದು ಹೇಳಿ ಅವನಿಗೆ ಓಬೇದನೆಂದು ಹೆಸರಿಟ್ಟರು. ಇವನೇ ಇಷಯನಿಗೆ ತಂದೆಯೂ ದಾವೀದನಿಗೆ ಅಜ್ಜನೂ ಆದನು" (ರೂತ 4:17). ದಾವೀದನ ನಂತರದ ವಂಶವಳಿಯು ಹಿಂದಿನ ಹತ್ತು ತಲೆಮಾರುಗಳವರೆಗೆ ಯೆಹೂದನ ಮಗನಾದ ಪೆರೆಚನವರೆಗೆ, ಮುಂದಿನ ಐದು ವಚನಗಳಲ್ಲಿ, ಕೊಡಲ್ಪಟ್ಟಿದೆ (ರೂತು 4:18-22).[2]

ರೂತ ಮತ್ತು ಬೋವಜರು ಬೇತ್ಲೆಹೇಮಿನಲ್ಲಿ ವಾಸಿಸುತ್ತಿದ್ದರು (ರೂತ 1:2, 19, 22; 2:4; 4:11), ಇಂದಿನ ಯೆರೂಸಲೇಮಿನಿಂದ ದಕ್ಷಿಣ ಪಶ್ಚಿಮದಲ್ಲಿ ಐದು ಆರು ಮೈಲುಗಳು ದೂರದಲ್ಲಿರುವ ಒಂದು ಚಿಕ್ಕ ಹಳ್ಳಿ. ಇಲ್ಲಿ ಅವರ ಮಗ ಓಬೇದ ಮತ್ತು ಮೊಮ್ಮಗ ಇಷಯ ವಾಸಿಸುತ್ತಿದ್ದರು - ಮತ್ತು ಅವರ ಮೊಮ್ಮಗ ದಾವೀದನು ಜನಿಸಿದನು.[3]

ದಾವೀದನು ಹತ್ತು ಮಕ್ಕಳಲ್ಲಿ ಚಿಕ್ಕವನು - ಎಂಟು ಹುಡುಗರು ಮತ್ತು ಎರಡು ಹುಡುಗಿಯರು.[4] ಹೆಚ್ಚಾಗಿ ಚಿಕ್ಕವರು ಎಲ್ಲರಿಗೂ ಇಷ್ಟ, ಆದರೆ ದಾವೀದನ ವಿಷಯದಲ್ಲಿ ಅದು ಇರಲಿಲ್ಲ. ಅವರು ಅವನಿಗೆ "ದಾವೀದ"[5] ಎಂದು ಹೆಸರಿಟ್ಟರು, ಅಂದರೆ "ಪ್ರೀಯನು" ಅದರೆ ಮೊದಮೊದಲಿಗೆ ಅದು ತಪ್ಪಾಗಿ ಬಳಕೆಯಾಗಿತ್ತು. ಮಗುವಾಗಿದ್ದಾಗ, ಅವನ ಕುಟುಂಬದಲ್ಲಿ ಇತರರಿಂದ ಅವನು ಶ್ಲಾಘಿಸಲ್ಪಡಲಿಲ್ಲ (1 ಸಮುವೇಲ 16:11). ಕೆಲವರಿಂದ ಅವನು ದ್ವೇಷಿಸಲ್ಪಟ್ಟನು (1 ಸಮುವೇಲ 17:28).

ಅವನ ಕುಟುಂಬವು ಬಡತನದಲ್ಲಿತ್ತು.[6] ಬೋವಜನು ಶ್ರೀಮಂದನಾಗಿದ್ದನು, ಬಹು ಜನ ಆಳುಗಳಿದ್ದರು, ಆದರೆ ಇಷಯನ ಕಾಲದಲ್ಲಿ, ಕುಟುಂಬವು ಕಷ್ಟದ ಸಮಯವನ್ನು ಹಾದು ಹೋಗಿತ್ತು. "ಕುಲ ಸ್ಥಂಭದಲ್ಲಿ ಕನಿಷ್ಠ ಮನುಷ್ಯನಾಗಿ," ಆಳುಗಳು ಮಾಡುವ ಬೇಸರದ, ಕಠಿಣವಾದ ಮತ್ತು ಹಿನೈಸಲ್ಪಟ್ಟ ಕೆಲಸಗಳನ್ನು ದಾವೀದನಿಗೆ, ಕೊಡಲಾಗುತ್ತಿತ್ತು.[7]

ದಾವೀದನು ಯಾರಿಗೂ ಬೇಡವಾಗಿ, ಪ್ರಾಮುಖ್ಯವಲ್ಲದ ಹಳ್ಳಿಯಲ್ಲಿ ಒಂದು ಬಡ ಕುಟುಂಬದಲ್ಲಿ ಜನಿಸಿದನು. ಅವನು ಯಾರಿಂದಲೂ ಶ್ಲಾಘಿಸಲ್ಪಡದೇ, ತನ್ನ ಸಹೋದರರಿಂದ ಹಾಸ್ಯಕ್ಕೊಳಗಾಗಿ, ಯಾರೂ ಮಾಡಲು ಇಷ್ಟಪಡದ ಕೆಲಸಕ್ಕೆ ಅಂಟಿಕೊಂಡನು. ಅವನು ಕಹಿಯಾದ ಮನಸ್ಸುಳ್ಳವನಾಗಿರುವದು ಬಹು ಸರಳವಾಗಿತ್ತು! ದಾವೀದನು ಒಬ್ಬ

ಪ್ರತಿಭಟಿಸುವವನಾಗಿ ಪರಿವರ್ತಿತನೆಗೊಂಡು, ತನ್ನ ಅವಿಧೇಯತೆಗೆ ದೇವರನ್ನು, ತನ್ನ ಕುಟುಂಬವನ್ನೂ ಮತ್ತು ಸಮಾಜವನ್ನೂ ದೂಷಿಸುತ್ತಾ ಇರಬಹುದಿತ್ತು! ಆದರೆ ಇದು ದಾವೀದನ ಪ್ರತಿಕ್ರೀಯೆ ಆಗಿರಲಿಲ್ಲ. ಬದಲಾಗಿ ಒಬ್ಬ ಬಾಲಕನಾಗಿ, ದಾವೀದನು ದೇವರ ಜೊತೆಯಲ್ಲಿ ಪ್ರತಿನಿತ್ಯ ನಡೆಯುತ್ತಿದ್ದನು.

ರೋಮೇನಿಯದಲ್ಲಿ ವಾಸಿಸುವ ನನ್ನ ಮೊಮ್ಮಗಳು ರೇಚಲ್ ಆಗ ತಾನೆ ನಡೆಯುವದಕ್ಕೆ ಪ್ರಾರಂಭಿಸಿದ್ದಾಳೆ ಎಂದು ಕೇವಲ ಎರಡು ದಿನಗಳ ಹಿಂದೆ ನನಗೆ ತಿಳಿದು ಬಂದಿತು. (ನನ್ನ ಮಗಳ ವರದಿಯ ಪ್ರಕಾರ, ರೇಚಲ್ ಈಗಾಗಲೇ ಅನೇಕ ಸಂಗತಿಗಳನ್ನು ಮಾಡಬಲ್ಲಳು ಮತ್ತು ಅವಳ ಜೊತೆಯಲ್ಲಿ ನಡೆಯುವದು, ದಣಿವುಂಟು ಮಾಡುತ್ತಿತ್ತು!) ಯಾವ ಕಡೆ ಮಗುವಿನ ಜೀವನದಲ್ಲಿ ನಡೆಯುವದಕ್ಕೆ ಕಲಿಯುವದು ಬಹು ಉತ್ಸುಕತೆಯ ಮೈಲುಗಲ್ಲಾಗಿದೆ. ಇದಕ್ಕಿಂದ ಹೆಚ್ಚು ಪ್ರಾಮುಖ್ಯವಾದದ್ದು, ದೇವರ ಮಾರ್ಗದಲ್ಲಿ ನಡೆಯುವದನ್ನು ಕಲಿಯುವದು. ಅಪೋಸ್ತಲನಾದ ಯೋಹಾನನು ಬರೆಯುತ್ತಾನೆ: "ನನ್ನ ಮಕ್ಕಳು ಸತ್ಯವನ್ನನುಸರಿಸಿ ನಡೆಯುವವರಾಗಿದ್ದಾರೆಂದು ಕೇಳು ವದಕ್ಕಿಂತ ಹೆಚ್ಚಾದ ಸಂತೋಷವು ನನಗಿಲ್ಲ" (3 ಯೋಹಾನ 4).

ಅಷ್ಟು ಚಿಕ್ಕ ಪ್ರಾಯದಲ್ಲಿ ದೇವರಿಗೆ ತನ್ನ ಜೀವನವನ್ನು ಸಮರ್ಪಿಸಲು ದಾವೀದನ ಮೇಲೆ ಯಾವ ಕಾರಣಗಳು ಪರಿಣಾಮ ಬೀರಿದವು ಎಂದು ನಮಗೆ ಗೊತ್ತಿಲ್ಲ. ಯೆಹೂದ್ಯ ಬಾಲಕರು ಧರ್ಮಶಾಸ್ತ್ರದಲ್ಲಿ ಬೋಧನೆಯನ್ನು ಪಡೆಯುವದು ಪದ್ಧತಿಯಾಗಿತ್ತು. ಅದರ ಜೊತೆಗೆ ದಾವೀದನ ಕುಟುಂಬವು ಕೂಡಿ ಬಂದಾಗ, ದೇವರು ಹೇಗೆ, ಇಸ್ರಾಯೇಲ್ ರಾಷ್ಟ್ರದೊಂದಿಗೆ ಇದ್ದನು ಮತ್ತು ವಾಗ್ದತ್ತ ದೇಶಕ್ಕೆ ಹೇಗೆ ಕರೆ ತಂದನು ಎಂಬ ಅದ್ಭುತ ಕತೆಗಳನ್ನು ಅವನು ಕೇಳಿರಬಹುದು. ತನ್ನ ಕುಟುಂಬವನ್ನು ದೇವರು ಹೇಗೆ ಆಶೀರ್ವದಿಸಿದ್ದಾನೆಂದು ಅವನು ಕೇಳಿರಬಹುದು: ರೂತ ಮತ್ತು ಬೋವಜ, ಓಬೇದ, ಈಗ ಇಷಯ ಮತ್ತು ಮಕ್ಕಳು. ದಾವೀದನು ಕೇಳುತ್ತಿರುವೆಂತೆಯೆ, ದೇವರ ವಾಕ್ಯದ ಬೀಜವು ಕಠಿಣವಾದ ಮಣ್ಣಿನ ಮೇಲೆ ಬೀಳಲಿಲ್ಲ (ಮತ್ತಾಯ 13:3-9, 18-23). ಬದಲಾಗಿ ಅದು ಬಲವಾಗಿರುವ, ನೆಲೆಗೊಂಡ ಮತ್ತು ಕರ್ತನಲ್ಲಿ ಸ್ಥಿರವಾದ ನಂಬಿಕೆಯಿಂದ ಬೆಳೆಯಿತು.[8]

ಪ್ರತಿಯೊಬ್ಬ ತಂದೆತಾಯಂದಿರೂ, ಒಂದು ಪಾಠವನ್ನು ಇಲ್ಲಿ ಕಲಿಯಬೇಕು. ನಮ್ಮ ಮಕ್ಕಳಿಗೆ ಆಳವಾದ ಆತ್ಮಿಕ ನೆಲೆಯನ್ನು ಕೊಡೋಣ. ದೇವರ ಪರಿಶುದ್ಧ ವಾಕ್ಯದ ಕುರಿತು ಮಕ್ಕಳಲ್ಲಿ ಪ್ರೀತಿ ಮತ್ತು ತಿಳುವಳಿಕೆಯನ್ನು ಹುಟ್ಟಿಸುವದಕ್ಕೆ ಎಂದೂ ತಡ ಮಾಡಬಾರದು (ಜ್ಞಾನೋಕ್ತಿ 22:6; ಎಫೆಸ 6:4; ಇತ್ಯಾದಿ).

ವೈಯಕ್ತಿಕವಾಗಿಯೂ ನಮಗೆ ಇತರ ಪಾಠಗಳು ಇಲ್ಲಿ ದೊರೆಯುತ್ತವೆ. ನಾವು ಪ್ರತಿಯೊಬ್ಬರೂ ದೇವರಿಗೆ ಜವಬ್ದಾರರಾಗಿದ್ದೇವೆ. ಕರ್ತನಿಗೆ ವಿಧೇಯರಾಗುವದಕ್ಕೆ ವಿಫಲರಾದರೆ, ನಾವು ಇತರರನ್ನು ಅಥವಾ ಪರಿಸ್ಥಿತಿಗಳನ್ನು ದೂಷಿಸುವದು ಸೂಕ್ತವಲ್ಲ. ಚಿಕ್ಕವರಾಗಲಿ ಅಥವಾ ಪ್ರಾಯಸ್ಥರಾಗಲಿ, ಪ್ರತಿಯೊಬ್ಬರೂ ಯೆಹೋವನಿಗೆ ವೈಯಕ್ತಿಕವಾಗಿ ಪ್ರತಿಷ್ಟಿಸಿಕೊಳ್ಳತಕ್ಕದ್ದು - ಆದಷ್ಟು ಬೇಗನೆ ಗುರುವಿನೊಡನೆ ನಡೆಯುವದಕ್ಕೆ ಸಮಯ ಬೇಕಾಗುತ್ತದೆ!

## ಕೆಲಸ ಮಾಡುವದಕ್ಕೆ ಕಲಿತ ಒಬ್ಬ ಕುರುಬ

ದಾವೀದನ ಜೀವನದ ಪ್ರಾರಂಭದ ದಿನಗಳ ಒಂದು ಸಂಗತಿಯೆನಂದರೆ ಅವನು ಕುರಿಗಳನ್ನು ಕಾಯುತ್ತಿದ್ದನು. ಇನ್ನೊಬ್ಬ ಮಗನಿದ್ದಾನೋ ಎಂದು ಸಮುವೇಲನು ಇಷಯನನ್ನು ಪ್ರಶ್ನಿಸಿದಾಗ, ಇಷಯನು, "ಚಿಕ್ಕವನು ಒಬ್ಬನಿರುತ್ತಾನೆ; ಅವನು ಕುರಿ ಮೇಯಿಸುವದಕ್ಕೆ ಹೋಗಿರುತ್ತಾನೆ" ಅಂದನು (1 ಸಮುವೇಲ 16:11). "ದಾವೀದನು ಸೌಲನನ್ನು ಬಿಟ್ಟು ತನ್ನ ತಂದೆಯ ಕುರಿಗಳನ್ನು ಮೇಯಿಸುವದಕ್ಕೋಸ್ಕರ ಬೇತ್ಲೆಹೇಮಿಗೆ ಹೋದನು"ಎಂದೂ ಓದುತ್ತೇವೆ (1 ಸಮುವೇಲ 17:15). ಸೈನ್ಯದಲ್ಲಿದ್ದ ತನ್ನ ಮೂವರು ಸಹೋದರರಿಗೆ

ಆಹಾರಸಾಮಗ್ರಿಗಳನ್ನು ತೆಗೆದುಕೊಂಡು ಹೋದಾಗ, ಅವರಲ್ಲಿ ಒಬ್ಬನು, "ಅಡವಿಯಲ್ಲಿರುವ ನಾಲ್ಕಾರು ಕುರಿಗಳನ್ನು ಯಾರಿಗೊಪ್ಪಿಸಿ ಬಂದಿ?" ವ್ಯಂಗ್ಯವಾಗಿ ಕೇಳಿದನು (1 ಸಮುವೇಲ 17:28; ಕೀರ್ತನೆ 78:70-72).

ದಾವೀದನು ಕುರಿ ಮೇಯಿಸುವ ಬಾಲಕನಾಗಿದ್ದಾಗಿನ ಕತೆಗಳು ಬೈಬಲಿನಲಿಲ್ಲ. ಆದರೆ, ದಾವೀದನ ಕೀರ್ತನೆಗಳು ಮತ್ತು ಇತರ ಬೈಬಲ್ ವಚನಗಳಿಂದಲೂ ಮತ್ತು ಆ ಕಸುಬಿನ ಕುರಿತು ಇತರ ಮೂಲಗಳಿಂದ ನಮಗೆ ತಳಿದಿರುವ ಸಂಗತಿಗಳಿಂದ ನಾವು ಚಿತ್ರವನ್ನು ಪುನಃ ರಚಿಸಬಹುದು.

ಕುರಿ ಕಾಯುವದು ಗೌರವವಾದ ಕಸುಬಾಗಿತ್ತು ಆದರೆ ಬಹು ಕೆಳಮಟ್ಟದ್ದಾಗಿತ್ತು.

ಕುರಿ ಕಾಯುವದರಲ್ಲಿ ಕುರಿಗಳನ್ನು ಬಿಟ್ಟು ಬೇರೆ ಯಾವ ಸಂಗಾತಿಗಳಿಲ್ಲದೇ ಇರುವ ಒಂಟಿತನದ ಜೀವನವಾಗಿತ್ತು.[9]

ಕುರಿ ಕಾಯುವದು ಜವಾಬ್ದಾರಿಯುತವಾದ ಜೀವನವೂ ಆಗಿತ್ತು. ಕುರುಬನಿಗೆ ತನ್ನ ಕುರಿಗಳ ಪರಿಚಯವಿರಬೇಕು ಮತ್ತು ಅವುಗಳನ್ನು ಹೇಗೆ ಪಾಲಿಸ ಬೇಕೆಂದು ಅರಿವಿರಬೇಕು. ಎಲ್ಲಿ ಹುಲ್ಲುಗಾವಲಿದೆಯೋ, ಎಲ್ಲಿ ವಿಶ್ರಾಂತಿಕರ ವಾದ ನೀರಿ ದೆಯೋ ಎಂದು ಪಾಲೆಸ್ತೀನಿನ ಮಾರ್ಗಗಳನ್ನು ಅವನು ತಿಳಿದಿರಬೇಕು. ಮಾರ್ಗ ಬಿಟ್ಟು ಹೋದ ಕುರಿಗಳನ್ನು ಅವನು ಹುಡುಕಬೇಕು. ಅಸ್ವಸ್ತವಾದ ಮತ್ತು ಗಾಯಗೊಂಡವುಗ ಳೊಂದಿಗೆ ಅವನು ಮೃದುವಾಗಿ ವರ್ತಿಸಬೇಕು. ಕುರಿಗಳು ಈಯುವಾಗ ಸಹಾಯ ಮಾಡ ಬೇಕು ಮತ್ತು ನವಜಾತ ಕುರಿಮರಿಗಳನ್ನು ಪಾಲಿಸ ಬೇಕು (ಕೀರ್ತನೆ 23; ಯೋಹಾನ 10:1-18; ಲೂಕ 15:4-6; ಕೀರ್ತನೆ 78:71).

ಕುರಿ ಕಾಯುವದು ಕಷ್ಟಕರವಾದ ಕೆಲಸವಾಗಿತ್ತು. ದಾವೀದನು ತನ್ನ ಕುರಿಗ ಳನ್ನು ಪಾಲಿಸುತ್ತಿರುವದನ್ನು ನೀವು ಆಲೋಚಿಸುವಾಗ, ಒಂದು ವೇಳೆ ನೀವು, ನೀಲಿ ಆಕಾಶದ ಕೆಳಗೆ ಸುಂದರವಾದ ಸಮೃದ್ಧ ಹಸಿರುಗಾವಲನ್ನು ಚಿತ್ರಿಸಿಕೊಂಡಿದ್ದರೆ, ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಂಡು, ಸುಡುವ ಬಿಸಿಲಿನಲ್ಲಿ, ಪೂರ್ವದಿಂದ ಬೀಸಿದ ಮರುಭೂಮಿಯ ಬಿಸಿ ಗಾಳಿಯಿಂದಾಗಿ ಎದ್ದ ಧೂಳಿನಲ್ಲಿ ಯೆಹೂದದ ಬಂಡೆಗಳುಳ್ಳ ಬೆಟ್ಟದ ತಪ್ಪಲನ್ನು ನೆನೆಪಿಸಿಕೊಳ್ಳಿರಿ. ಪಾಲೇಸ್ತೀನಿನಲ್ಲಿ ಕುರಿ ಮೇಯಿ ಸುವ ಕೆಲಸವೆಂದರೆ, ಬಿಸಿಯಾದ, ಧೂಳಿನಿಂದ ತುಂಬಿದ ಮತ್ತು ಸಾಮಾನ್ಯವಾಗಿ ಯಾರೂ ಶ್ಲಾಘಿಸದ ಕೆಲಸವಾಗಿದೆ.

ಕುರಿ ಮೇಯಿಸುವ ಕೆಲಸವು ಕೆಲವೊಮ್ಮೆ ಅಪಾಯಕಾರಿಯಾಗಿದೆ. ದ್ವಿಚಕ್ರವಹಾನವನ್ನು ಚಲಾಯಿಸುವ ನನ್ನ ಒಬ್ಬ ಸ್ನೇಹಿತನು ಹೀಗೆ ಹೇಳುತ್ತಾನೆ, "ಅದು ತಾಸುಗಟ್ಟಳೆ ಬೇಸರತರಿಸುವ ಕೆಲಸ - ಅತಿ ಭಯಪಡಿಸುವ ಕ್ಷಣಗಳಿಂದ ಆಗಾಗ್ಗೆ ಕೂಡಿರುತ್ತದೆ!"[10] ದಾವೀದನೂ ಕುರಿ ಮೇಯಿಸುವ ಕೆಲಸದ ಕುರಿತು ಅದನೇ ಹೇಳ ಬಹುದು. ಅವನು ಕುರಿಗಳನ್ನು ಅಪಾಯದಿಂದ ತುಂಬಿದ ಕೊಳ್ಳಗಳಲ್ಲಿ ನಡೆಸಿಕೊಂಡು ಹೋಗ ಬೇಕು, "ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ" (ಕೀರ್ತನೆ 23:4). ಅವನು ತನ್ನ ಕುರಿಗಳನ್ನು ಕಳ್ಳರಿಂದ ಸಂರಕ್ಷಿಸಬೇ ಕಿತ್ತು, ಉದಾಹರಣೆಗೆ ಹತ್ತಿರದ ಫಿಲಿಷ್ಟಿಯರು ಅವುಗಳನ್ನು ಕದ್ದುಕೊಳ್ಳಲು ಬರುವಾಗ (ಯೋ ಹಾನ 10:1). ಅವನು ಹಿಂಡಿನಲ್ಲಿನ ಚಿಕ್ಕ ಮತ್ತು ಅಸಹಾಯಕ ಕುರಿಮರಿಗಳನ್ನು ಬೇಟೆ ಯಾಡಲು ಬರುವ ಕಾಡು ಮೃಗಗಳೊಂದಿಗೆ ಮತ್ತು ಹೊಟ್ಟೆಬಾಕ ಪಕ್ಷಿಗಳೊಡನೆ ಹೋರಾಡ ಬೇಕಿತ್ತು. ಅರಸನಾದ ಸೌಲನಿಗೆ ದಾವೀದನು ಈ ಬೇಟೆಯಾಡಿ ತಿನ್ನುವ ಪ್ರಾಣಿಗಳ ಕುರಿತು ಹೇಳಿದನು:

> ನಿನ್ನ ಸೇವಕನಾದ ನಾನು ನನ್ನ ತಂದೆಯ ಕುರಿಗಳನ್ನು ಕಾಯುತ್ತಿದ್ದಾಗ ಸಿಂಹ ವಾಗಲಿ ಕರಡಿಯಾಗಲಿ ಬಂದು ಹಿಂಡಿನಲ್ಲಿನ ಕುರಿಮರಿಯನ್ನು ಹಿಡಿದುಕೊಂಡು ಹೋಗಲು ನಾನು ಒಡನೆ ಅದನ್ನು ಬೆನ್ನಟ್ಟಿ ಹೊಡೆದು ಕುರಿಮರಿಯನ್ನು ಕಿತ್ತುಕೊಳ್ಳುತ್ತಿದ್ದೆನು. ಅದು

ಹಿಂತಿರುಗಿ ನನ್ನ ಮೇಲೆ ಬಿದ್ದರೆ ಅದನ್ನು ಗದ್ದ ಹಿಡಿದು ಬಡಿದು ಕೊಂದುಹಾಕುತ್ತಿದ್ದೆನು. ನಿನ್ನ ಸೇವಕನು ಸಿಂಹವನ್ನೂ ಕರಡಿಯನ್ನೂ ಕೊಂದುಹಾಕುತ್ತಿದ್ದನು (1 ಸಮುವೇಲ 17:34-36).

ಒಂದು ಸಿಂಹವ್ರೋ ಅಥವಾ ಕರಡಿಯೋ ಮುಖಾ ಮುಖಿಯಾಗಿ ಒಬ್ಬ ಯೌವನಸ್ಥನು ಎದುರಿಸುವದನ್ನು ಸ್ವಲ್ಪ ಅಲೋಚಿಸಿರಿ! ನಾನೇನು ಮಾಡುತ್ತಿದ್ದೇನೋ ನಾನರಿಯೇ. ನಾನು ಓಡಿಹೋಗುವದಾದರೆ ಒಂದೇ ಸ್ಥಳದಲ್ಲಿ ಬಹು ಸಮಯ ಕಳೆಯುತ್ತಿದ್ದೆನು ಮತ್ತು ನಾನು ಹತ್ತುವದರಲ್ಲಿ ಉತ್ತಮನಲ್ಲ. ದಾವೀದ, ಇನ್ನೂ ಹದಿವಯಸ್ಸಿನವನು ಆದರೆ ಈ ಭಯಂಕರ ಮೃಗಗಳನ್ನು ಎದುರಿಸಿ ಕೊಂದನು! ಅವನ ಬಳಿ ಯಾವ ಆಯುಧಗಳಿದ್ದವು? ಅವನ ಕೋಲು (ಒಂದು ದೊಡ್ಡದಾದ ಬಡಿಗೆ, ದೊಣ್ಣೆಯಾಗಿ ಉಪಯೋಗಿಸಬಹುದು) ಮತ್ತು ಅವನ ಕವಣೆ (ಕೀರ್ತನೆ 23:4; 1 ಸಮುವೇಲ 17:40) - ಮತ್ತು ದೇವರಲ್ಲಿನ ಅವನ ನಂಬಿಕೆ. "ನನ್ನನ್ನು ಅಂಥ ಸಿಂಹದ ಮತ್ತು ಕರಡಿಯ ಉಗುರುಗಳಿಗೆ ತಪ್ಪಿಸಿದ ಯೆಹೋವನು" ಎಂದು ಹೇಳಿದನು (1 ಸಮುವೇಲ 17:37).

ತನ್ನ ಜನರನ್ನು ನಡಿಸಿಕೊಂಡು ಹೋಗಲು ಒಬ್ಬ ವ್ಯಕ್ತಿಯನ್ನು ದೇವರು ಹುಡುಗುತ್ತಿದ್ದಾಗ, ಅವನು ಮುದ್ದುಮಾಡಲ್ಪಟ್ಟ, ಯಾವಾಗಲೂ ಸೇವೆ ಮಾಡಿಸಿಕೊ ಳ್ಳುವ ರೂಢಿಯಿದ್ದ ಒಬ್ಬ ಪ್ರಿಯಕರನನ್ನು ಹುಡುಕಲಿಲ್ಲ. ಹೇಗೆ ಕೆಲಸ ಮಾಡಬೇಕೆಂದು ಅರಿವಿದ್ದ, ಜವಾಬ್ದಾರಿಯನ್ನು ಅರಿತಿದ್ದ, ಕಷ್ಟಗಳನ್ನು ತಾಳಿಕೊಳ್ಳುವವನನ್ನು, ಎಷ್ಟೇ ಬೆಲೆಯಾದರೂ ಕೆಲಸ ಮಾಡುವ ಒಬ್ಬ ವ್ಯಕ್ತಿಯನ್ನು ದೇವರು ಹುಡುಕಿದನು. ಬೇತ್ಲೆಹೇಮಿನ ಹೊರಗೆ ಇದ್ದ ಹುಲ್ಲುಗಾವಲುಗಳಲ್ಲಿ ಒಬ್ಬೊಂಟಿಗನಾಗಿ ದಾವೀದನು ಈ ಪಾಠಗಳನ್ನು ಕಲಿತನು. ಇಸ್ರಾಯೇಲಿನ ಜನರನ್ನು ಕುರುಬನಾಗಿ ಪಾಲಿಸುವದನ್ನು ಕಲಿಯುವದಕ್ಕಿಂದ ಮೊದಲು ಕುರಿಗಳನ್ನು ಪಾಲಿಸುವದನ್ನು ಕಲಿತನು.

ಇದಲ್ಲದೆ ಆತನು ತನ್ನ ಸೇವಕನಾದ ದಾವೀದನನ್ನು
ಆರಿಸಿ ಕುರಿ ಹಟ್ಟಿಯಿಂದ ತೆಗೆದುಕೊಂಡು
ಮರಿಕುರಿಗಳನ್ನು; ರಕ್ಷಿಸುವ ಕೆಲಸದಿಂದ
    ಬಿಡಿಸಿ ಅವನನ್ನು ತನ್ನ ಪ್ರಜೆಗಳಾದ
ಯಾಕೋಬ್ಯರನ್ನು ಅಂದರೆ ಸ್ವಾಸ್ತ್ಯವಾಗಿರುವ,
ಇಸ್ರಾಯೇಲ್ಯರನ್ನು ತನ್ನ ಸಾಕುವದಕ್ಕೆ ನೇಮಿಸಿದನು.
ಇವನು ಅವರನ್ನು ಯಥಾರ್ಥ
    ಹೃದಯದಿಂದ ಸಾಕಿ,
ತನ್ನ ಹಸ್ತ ಕೌಶಲ್ಯದಿಂದ ನಡೆಸಿದನು
    (ಕೀರ್ತನೆ 78:70-72).

ಜವಾಬ್ದಾರಿಯ ಅರಿವು ಇಂದಿನ ದಿನಗಳಲ್ಲಿ ದೊಡ್ಡ ಅವಶ್ಯಕತೆಯಾಗಿವೆ. ನಮ್ಮ ಕೆಲಸ ಸ್ಥಳಗಳಲ್ಲಿ ಬೇಜವಾಬ್ದಾರಿತನ ಕಾಣಿಸಿಕೊಂಡಿದೆ. ನಮ್ಮ ನೆರೆಹೊರೆಯಲ್ಲಿ ಬೇಜವಾ ಬ್ದಾರಿತನ ಕಾಣಿಸಿಕೊಂಡಿದೆ. ರಾಜನೀತಿಯಲ್ಲಿ ಬೇಜವಾಬ್ದಾರಿತನ ಕಾಣಿಸಿಕೊಂಡಿದೆ. ದಾಂಪತ್ಯ ಜೀವನದಲ್ಲಿ ಬೇಜವಾಬ್ದಾರಿತನ ಕಾಣಿಸಿಕೊಂಡಿದೆ. ನಮ್ಮ ಕುಟುಂಬಗಳಲ್ಲಿ ಬೇಜವಾಬ್ದಾರಿತನ ಕಾಣಿಸಿಕೊಂಡಿದೆ. ಮತ್ತು ನಮ್ಮ ಸಭೆಗಳ ಲ್ಲಿಯೂ ಬೇಜವಾಬ್ದಾರಿತನ ಕಾಣಿಸಿಕೊಂಡಿದೆ.

ನಾವು ಪ್ರತಿಯೊಬ್ಬರೂ ವೈಯಕ್ತಿಕವಾಗಿ ಅಳವಡಿಸಿಕೊಳ್ಳೋಣ. ನಾವು ಬೇಜವಾಬ್ದಾ ರರಾಗಿದ್ದರೆ, ನಮ್ಮ ಅಲಕ್ಷ್ಯತನಕ್ಕಾಗಿ ಪಶ್ಚಾತಾಪಪಡೋಣ ಮತ್ತು ನಮ್ಮ ಮಾರ್ಗವನ್ನು

ಬದಲಾಯಿಸೋಣ! ಕೆಲಸ ಮಾಡುವದು ಹೇಗೆ ಎಂದು ಅರಿತವರನ್ನೂ ಮತ್ತು ಜವಾಬ್ದಾರಿಯನ್ನು ಹೊರುವವರನ್ನು ಮಾತ್ರ ದೇವರು ಉಪಯೋಗಿಸುತ್ತಾನೆ!

ನಾವು ಪಾಲಕರಾಗಿದ್ದರೆ, ಜವಾಬ್ದಾರಿಯುತ ಪುರಷ ಮತ್ತು ಸ್ತ್ರೀಯಾಗಿರುವದನ್ನು ಮಕ್ಕಳಿಗೆ ಕಲಿಸುವದಕ್ಕಿಂತ ಕೆಲವು ಸಂಗತಿಗಳು ಮಾತ್ರ ಪ್ರಾಮುಖ್ಯವಾಗಿವೆ. ನಾವು ನಮ್ಮ ಮಕ್ಕಳಿಗೆ ಹೇಗೆ ಕೆಲಸ ಮಾಡಬೇಕೆಂದು ಕಲಿಸೋಣ (ಹೋಲಿಸು 2 ಥೆಸಲೋನೀಕ 3:10)! ಅವರಿಗೆ ಜವಾಬ್ದಾರಿಯನ್ನು ಕೊಡೋಣ! ನೇಮಿಸಿದ ಕಾರ್ಯವನ್ನು ಮಾಡುವಂತೆ ಜವಾಬ್ದಾರರನ್ನಾಗಿಸೋಣ! ದೇವರಿಂದ ಉಪಯೋಗಿಸಲ್ಪಡುವಂತೆ ಅವರನ್ನು ಸಿದ್ಧಗೊಳಿಸೋಣ!

## ಕಾಯುವದನ್ನು ಕಲಿತ ರಾಜ

ನಾವು ಈಗ 1 ಸಮುವೇಲ 16 ಗಮನಿಸಲು ಸಿದ್ಧರಾಗಿದ್ದೇವೆ. ಇಲ್ಲಿಯವರೆಗೆ ದಾವೀದನು ಕುರಿತು 1 ಸಮುವೇಲನಲ್ಲಿ ನಮೂದಿಸಿರಲಿಲ್ಲ. ಗಮನವು ಕೇವಲ ಸೌಲನೆಂಬ ಆಡಂಬರದ ಅರಸನ ಮೇಲಿತ್ತು. ಸೌಲ ಆಳ್ವಿಕೆಯ ಹೇಗೂ ಸರಿಯಾಗಿರಲಿಲ್ಲ. ದೇವರ ಮೇಲೆ ಆತುಕೊಳ್ಳುವ ಬದಲು, ಸೌಲನು ತನ್ನ ಜ್ಞಾನ ಮತ್ತು ಬಲದ ಮೇಲೆ ಆತುಕೊಂಡನು ತನ್ನ ಆಳ್ವಿಕೆಯ ಪ್ರಾರಂಭದಲ್ಲಿ, ಅವನು ತನ್ನ ಸೇನೆಯನ್ನು ಕಳಕೊಳ್ಳುವ ಭಯದಲ್ಲಿದ್ದನು ಮತ್ತು ದೇವರ ಅಪ್ಪಣೆಯ ಪ್ರಕಾರ ಸಮುವೇಲನು ಬರುವವರೆಗೆ ತಡೆಯದೇ ಯಜ್ಞವನ್ನು ಸಮರ್ಪಿಸಿದನು (1 ಸಮುವೇಲ 13:13). ನಂತರ ದೇವರ ಆದೇಶದ ಮೇರೆಗೆ ಅಮಾಲೇಕ್ಯರನ್ನು ಸಂಪೂರ್ಣ ವಾಗಿ ನಾಶಮಾಡುವ ಬದಲು, ಅವರ ಅರಸನನ್ನು ಮತ್ತು ಉತ್ತಮ ಪಶುಗಳನ್ನು ಉಳಿಸಿದನು (1 ಸಮುವೇಲ 15:2, 3, 9). ದೇವರು ಸಮುವೇಲ ನಿಗೆ, "ಸೌಲನನ್ನು ಅರಸನನ್ನಾಗಿ ಮಾಡಿದ್ದಕ್ಕೆ ಈಗ ಪಶ್ಚಾತಾಪಪಡುತ್ತೇನೆ. ಅವನು ನನ್ನನ್ನು ಬಿಟ್ಟು ಬಿಟ್ಟನು; ನನ್ನ ಆಜ್ಞೆಗಳನ್ನು ನೆರವೇರಿಸುವದಿಲ್ಲ" (1 ಸಮುವೇಲ 15:11). ಸೌಲನನ್ನು ಅರಸನಾಗಿ ಅಭಿಷೇಕಿಸಿದ ಸಮುವೇಲನು ಮುರಿದ ಹೃದಯವುಳ್ಳವನಾದನು. ಆದರೆ ಯೆಹೋವನ ಸಂದೇಶವನ್ನು ಸೌಲನಿಗೆ ತಿಳಿಸಿದನು: "ಯೆಹೋವನು ಈ ಹೋತ್ತು ಇಸ್ರಾಯೇಲ್ ರಾಜ್ಯವನ್ನು ನಿನ್ನಿಂದ ಕಿತ್ತು ನಿನಗಿಂದ ಉತ್ತಮನಾದ ಇನ್ನೊಬ್ಬನಿಗೆ ಕೊಟ್ಟಿದ್ದಾನೆ" (1 ಸಮುವೇಲ 15:28). 1 ಸಮುವೇಲ 16, ಮುಂದಿನ ಅರಸ ಮತ್ತು ನಂತರದ ಘಟನೆಗಳನ್ನು ತಿಳಿಸುತ್ತದೆ.

ಯೆಹೋವನು ದುಃಖಿತನಾಗಿ ರಾಮದಲ್ಲಿದ್ದ ಸಮುವೇಲನ ಬಳಿಗೆ ಬಂದನು (1 ಸಮುವೇಲ 15:34; 7:17). "ನಾನು ಸೌಲನನ್ನು ಇಸ್ರಾಯೇಲ್ಯರ ಅರಸನಾಗಿರುವದಕ್ಕೆ ಅಯೋಗ್ಯನೆಂದು ತಳ್ಳಿಬಿಟ್ಟಿದ್ದೇನಲ್ಲಾ; ನೀನು ಅವನಿಗೋಸ್ಕರ ಎಷ್ಟರವರೆಗೆ ದುಃಖಿಸುತಿರುವಿ? ಕೊಂಬನು ಎಣ್ಣೆಯಿಂದ ತುಂಬಿಸಿಕೊಂಡು ಬಾ; ನಾನು ನಿನ್ನನ್ನು ಬೇತ್ಲೆಹೇಮಿನವನಾದ ಇಷಯನ ಬಳಿಗೆ ಕಳುಹಿಸುತ್ತೇನೆ; ಅವನು ಮಕ್ಕಳ ಲ್ಲೊಬ್ಬನನ್ನು ಅರಸನನ್ನಾಗಿ ಆರಿಸಿಕೊಂಡಿದ್ದೇನೆ" ಎಂದು ಹೇಳಿದನು (1 ಸಮುವೇಲ 16:1). ದೇವರು ಸಮುವೇಲನಿಗೆ ಸೇನೆಯ ಬಳಿಗೆ ಹೋಗಿ ಒಬ್ಬ ಯೋಧನನ್ನು ಆರಿಸು ಎಂದು ಹೇಳ ಲಿಲ್ಲ. ಪ್ರವಾದಿಗಳ ಮಂಡಳಿಗೆ ಹೋಗಿ ಒಬ್ಬ ಪಂಡಿತನನ್ನು ಆಯ್ಕೆ ಮಾಡು ಎಂದು ಹೇಳಲಿಲ್ಲ. ಒಂದು ದೊಡ್ಡ ಪಟ್ಟಣಕ್ಕೆ ಹೋಗಿ ಒಬ್ಬ ಪೌರ ನಾಯಕನನ್ನು ಆಯ್ದುಕೋ ಎಂದೂ ಹೇಳಲಿಲ್ಲ. ಬದಲಾಗಿ ನೀಟಾದ ಮಾರ್ಗದಿಂದ ದೋರವಿರುವ ಒಂದು ಚಿಕ್ಕ ಪಟ್ಟಣಕ್ಕೆ ಹೋಗಲು ಹೇಳಿದನು - ಆ ಭಾಗದಲ್ಲಿದ್ದ ಒಬ್ಬ ಬಡ ಒಕ್ಕಲಿಗನ ಬಳಗೆ[11] ದೇವರ ಮಾರ್ಗಗಳು ನಮ್ಮ ಮಾರ್ಗಗಳಲ್ಲ (ಯೇಶಾಯ 55:8, 9).

ಸಮುವೇಲ, ಸೌಲನಿಗೆ ಭಯಪಟ್ಟನು.[12] "ನಾನು ಹೋಗುವದು ಹೇಗೆ" ಎಂದು ಕರ್ತನನ್ನು ಕೇಳಿದನು. "ಸೌಲನಿಗೆ ಗೊತ್ತಾದರೆ ಅವನು ನನ್ನನ್ನು ಕೊಂದುಹಾಕುವನಲ್ಲವೇ?" ಅಂದನು (16:2ಎ). ತನ್ನ ಬದಲಾಗಿ ಇನ್ನೊಬ್ಬನು ಬರುವನೆಂದು ತಿಳಿದು ಸೌಲನು, ಅರಸೊತ್ತಿಗೆಗೆ ತನಗಿರುವ ಅಧಿಕಾರಕ್ಕೆ ಸವಾ ಲೊಡ್ಡುವ ವ್ಯಕ್ತಿಯನ್ನು ಹುಡುಕುತ್ತಿದ್ದನು.

ದೇವರು ಸಮುವೇಲನಿಗೆ, “ನೀನು ಒಂದು ಕಡಸನ್ನು ತೆಗೆದುಕೊಂಡು ಹೋಗಿ ಯೆಹೋವನಿಗೋಸ್ಕರ ಯಜ್ಞ ಮಾಡುವದಕ್ಕೆ ಬಂದಿದ್ದೇನೆಂದು ಹೇಳು” ಅಂದನು (16:2ಬಿ). ದೇವರು ಸಮುವೇಲನಿಗೆ ಸುಳ್ಳು ಹೇಳುವದಕ್ಕೆ ಹೇಳಿದನೋ? ಇಲ್ಲ, ಸಮುವೇಲನು ಒಂದು ಕಡಸನ್ನು ತೆಗೆದುಕೊಂಡು ಹೋಗಿ ಯಜ್ಞವನ್ನರ್ಪಿಸಿದನು (16:4, 5). ಪ್ರತ್ಯೇಕ ಪರಿಸ್ಥಿತಿಗಳಲ್ಲಿ, ನಮ್ಮ ಮೂಲ ಉದ್ದೇಶವನ್ನು ಮುಚ್ಚಿಟ್ಟು, ನಮ್ಮ ಎರಡನೇಯ ಉದ್ದೇಶವನ್ನು ಪ್ರಕಟಪಡಿಸುವದಕ್ಕೆ ಅನುಮತಿಯಿದೆ. ಈ ಘಟನೆಯಲ್ಲಿ, ಯಾದವೀಕಲಹವನ್ನು ತಡೆಯುವದಕ್ಕೆ ಮುಚ್ಚಿಡುವದು ಬಹು ಅವಶ್ಯವಾಗಿತ್ತು - ಮತ್ತು ಸಮುವೇಲ ಮತ್ತು ದೇವರು ಆಯ್ಕೆ ಮಾಡಿದವನನ್ನು ರಕ್ಷಿಸುವದು ಅಗತ್ಯವಿತ್ತು.

ದೇವರು ತನ್ನ ಸಲಹೆಯನ್ನು ಮುಂದುವರಿಸಿ: “ಇಷಯನನ್ನು ಯಜ್ಞಕ್ಕೆ ಕರೆ. ಆಮೇಲೆ ನೀನು ಮಾಡಬೇಕಾದದ್ದನ್ನು ನಾನೇ ತಿಳಿಸುತ್ತೇನೆ; ನಾನು ಯಾವನನ್ನು ತೋರಿಸುತ್ತೇನೋ ಅವನನ್ನು ಅಭಿಷೇಕಿಸಬೇಕು” (16:3).

ಸಮುವೇಲನು ಕೊಂಬನ್ನು ಎಣ್ಣೆಯಿಂದ ತುಂಬಿಸಿ ದಕ್ಷಿಣದ ಕಡೆ ಕಡಸವನ್ನು ತೆಗೆದುಕೊಂಡು ಬೇತ್ಲೆಹೇಮಿಗೆ ತೆರಳಿದನು. ಅವನು ಆ ಹಳ್ಳಿಯನ್ನು ಮುಟ್ಟಿದಾಗ, “ಆ ಊರಿನ ಹಿರಿಯರು ನಡುಗುತ್ತಾ ಬಂದು ಅವನನ್ನು ಎದುರುಗೊಂಡರು” (16:4ಎ). ಸಮುವೇಲನು ಇನ್ನೂ ನ್ಯಾಯಸ್ಥಾಪಕನಾಗಿ ಕೆಲಸ ಮಾಡುತ್ತಿದ್ದನು (1 ಸಮುವೇಲ 7:15). ಬೇತ್ಲೆಹೇಮ್ ಅವನ ಮಾರ್ಗದಲ್ಲಿರಲಿಲ್ಲ (1 ಸಮುವೇಲ 7:16) ಆದುದರಿಂದ ಈ ಮಹಾ ನ್ಯಾಯಸ್ಥಾಪಕನು ಅವರ ಚಿಕ್ಕ ಹಳ್ಳಿಗೆ ಆಕಸ್ಮತ್ತಾಗಿ ಬೇಟಿ ಕೊಟ್ಟಾಗ, ಆ ಪಟ್ಟಣದ ಅಧಿಕಾರಿಗಳ ಮನಸ್ಸಿನಲ್ಲಿ ಹಾದು ಹೋದ ಮೊದಲ ವಿಷಯವೇನೆಂದರೆ, ಒಬ್ಬ ಬೇತ್ಲೆಹೇಮಿನವನು ಏನೋ ಮಹಾ ದೊಡ್ಡ ತಪ್ಪು ಮಾಡಿರಬಹುದು. ಬಹುಶಃ ಸಂಪೂರ್ಣ ಹಳ್ಳಿಯ ಶಿಕ್ಷೆಗೆ ಒಳಗಾಗ ಬಹುದು. ನಡುಗುತ್ತಾ ಆ ಪಟ್ಟಣದ ಅಧಿಕಾರಿಗಳು ಕೇಳಿ ದರು, “ನಿನ್ನ ಆಗಮನವು ನಮಗೆ ಶುಭಕಾರಿಯಾಗಿದೆಯೇ?” ಎಂದು ಪ್ರಶ್ನಿಸಿದರು (16:4ಬಿ). ಸಮುವೇಲನು, ಹೌದು ಶುಭಕರವಾಗಿದೆ. ಯೆಹೋವನಿಗೆ ಯಜ್ಞವರ್ಪಿಸುವದಕ್ಕೆ ಬಂದಿದ್ದೇನೆ ಅಂದನು (16:5ಎ).

ಸಮುವೇಲನು ಹಿರಿಯರಿಗೆ ತಮ್ಮನ್ನು ಶುದ್ಧಪಡಿಸಿಕೊಂಡು[13] ಯಜ್ಞಕ್ಕೆ ಬರಲು ಹೇಳಿದನು (16:5ಬಿ). ಯಜ್ಞವು ಸಮರ್ಪಿಸಲ್ಪಟ್ಟಾಗ ಮಾಂಸದ ಆಯ್ದುಕೊಂಡ ಭಾಗಗಳನ್ನು ಮಾತ್ರ ಅರ್ಪಿಸುತ್ತಿದ್ದನು; ಉಳಿದವುಗಳನ್ನು ತಿನ್ನುತ್ತಿದ್ದರು (1 ಅರಸು 19:21; ಇತ್ಯಾದಿ). ಬೇತ್ಲೆಹೇಮಿನಲ್ಲಿ ಒಂದು ಹಬ್ಬವನ್ನು ಆಚರಿಸಬೇಕಿತ್ತು, ಇಸ್ರಾಯೇಲಿನಲ್ಲಿ ಗಣ್ಯರಾದ ವ್ಯಕ್ತಿಗಳು ಅಲ್ಲಿ ಉಪಸ್ಥಿತರಿದ್ದರು ಮತ್ತು ಈ ಪ್ರಮುಖ ವ್ಯಕ್ತಿಗಳು ಆಹ್ವಾನಿಸಲ್ಪಟ್ಟರು. ಈ ನಿದ್ರಾವಸ್ಥೆಯ ಚಿಕ್ಕ ಪಟ್ಟಣದಲ್ಲಿ ಜರುಗಿದ ಅತಿ ಉತ್ಸುಕತೆಯ ವಿಷಯವಾಗಿತ್ತು.

ಸಮುವೇಲನು ಇಷಯನನ್ನು ಮತ್ತು ಅವನ ಪುತ್ರರನ್ನು ಬರ ಹೇಳಿದನು (16:5ಸಿ).[14] ಇಷಯನು ಈ ಆಮಂತ್ರಣವನ್ನು ಆಶ್ಚರ್ಯದಿಂದಲೂ ಮತ್ತು ಆನಂದದಿಂದಲೂ ಹೇಗೆ ಸ್ವೀಕರಿಸಿರಬಹುದೆಂದು ಆಲೋಚಿಸಿರಿ! ಆ ಸಮಾಜದಲ್ಲಿ ಗೌರವಿಸಲ್ಪಟ್ಟ ಗಣ್ಯ ವ್ಯಕ್ತಿಗಳಲ್ಲಿ ಅವನ ಅಜ್ಜನಾದ ಬೋವಜನು ಒಬ್ಬನು. ಬಹುಶಃ ಉತ್ತಮ ಸಂಗತಿಗಳು ಅವನ ಜೀವನದಲ್ಲಿ ನಡೆಯಲಿದ್ದವು. ಇಷಯನು ತನ್ನ ಪುತ್ರರೊಂದಿಗೆ ಸ್ನಾನ ಮಾಡಿ ಮತ್ತು ಉತ್ತಮ ವಸ್ತ್ರಗಳನ್ನು “ಭಾನುವಾರದ ವಸ್ತ್ರಗ ಳನ್ನು” ಧರಿಸಿ, ಉತ್ಸವಕ್ಕೆ ತೆರಳಿದನು.

ಯಜ್ಞವು ನಡೆಯುವ ಸ್ಥಳಕ್ಕೆ ಅವರು ನಡೆದು ಬರುತ್ತಿರುವಾಗ, ಸಮುವೇಲನು ಇಷಯನ ಹಿರೀ ಮಗನಾದ ಎಲಿಯಾಬನ ಕಡೆಗೆ ನೋಡಿದನು;[15] ಅವನು ಎತ್ತರವಾಗಿದ್ದು ಚೆಲುವಾಗಿದ್ದನು.[16] ಅವನು ಅರಸನೆಂತೆಯೇ ತೋರಿದನು. “ನಿಶ್ಚಯವಾಗಿ ಯೆಹೋವನು ಅಭಿಷೇಕಕ್ಕೆ ಆರಿಸಿಕೊಂಡವನು ಆತನ ಮುಂದೆ ಇದ್ದಾನೆ” ಎಂದು ಸಮುವೇಲನು ಅಂದುಕೊಂಡನು (16:6).

ನಾವು ಈಗ 1 ಸಮುವೇಲದ ಬಹು ಪ್ರಾಮುಖ್ಯವಾದ ವಚನಕ್ಕೆ ಬರೋಣ: ಯೆಹೋವನು

ಸಮುವೇಲನಿಗೆ, "ನೀನು ಅವನ ಚೆಲುವಿಕೆಯನ್ನೂ ನೀಳವನ್ನೂ ನೋಡ ಬೇಡ; ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ. ಯೆಹೋವನು ಮನುಷ್ಯರಂತೆ ಹೊರಗಿನ ತೋಲಿಕೆಯನ್ನು ನೋಡದೇ ಹೃದಯವನ್ನೇ ನೋಡುವವನಾಗಿದ್ದಾನೆ" ಅಂದನು (16:7). "ಹೊರಗಿನ ತೋಲಿಕೆ" ಎಂಬ ಮಾತು ಇಬ್ರಿಯ ಪದ "ಕಣ್ಣುಗಳು" ಎಂಬ ಪದದಿಂದ ಭಾಷಾಂತರಿಸಲಾಗಿದೆ, ಇದು ಮುಖವನ್ನು ಸೂಚಿಸಿ ಹೇಳುವ ಒಂದು ಸಾಂಕೇತಿಕವಾಗಿದೆ.

ಮನುಷ್ಯರು ಹೊರಗಿನ ತೋಲಿಕೆಯ ಮೇಲಿನಿಂದ ತೀರ್ಪು ಮಾಡುತ್ತಾರೆ ಎಂದು ಇದು ಆಗಲೂ ಸತ್ಯವಾಗಿತ್ತು, ಈಗಲೂ ಸತ್ಯವಾಗಿದೆ. ನಮ್ಮ ಬೋಧಕರು ಬೋಧಕರ ಹಾಗೆ ತೋರಲು ನಾವು ಇಷ್ಟಪಡುತ್ತೇವೆ (ನನ್ನ ಪತ್ನಿಯು ಇನ್ನೂ ನನ್ನ ವಿಷಯದಲ್ಲಿ ಕೆಲಸ ಮಾಡುತ್ತಿದ್ದಾಳೆ). ನಮ್ಮ ಆಟಗಾರರು ಆಟಗಾರರಂತೆ ಕಾಣಲು ಇಷ್ಟಪಡು ತ್ತೇವೆ. ನಮ್ಮ ರಾಷ್ಟ್ರ ಪತಿಗಳು, ರಾಷ್ಟ್ರಪತಿಗಳಂತೆ ಕಾಣಲು ಇಷ್ಟಪಡುತ್ತೇವೆ. ವ್ಯಕ್ತಿಗಿಂತ ಹೊರಗಿನ ಶೃಂಗಾರವೇ ಮುಖ್ಯವಾಗಿದೆ.

ಜನರು ತಮ್ಮ ಕಲ್ಪನೆಗೆ ತಕ್ಕ ಹಾಗೆ ಜೀವಿಸದಿರುವದನ್ನು ನೋಡಿ ನಾವು ಎಷ್ಟು ಬಾರಿ ನಿರಾಶರಾಗಿದ್ದೇವೆ? ಸುಂದರವಾದ ಮುಖವು ಉತ್ತಮವಾದ ಪತ್ನಿಯನ್ನು ಒದಗಿಸದು ಎಂದು ಅನೇಕ ಯೌವನಸ್ಥರು ನಿರಾಶರಾಗಿದ್ದಾರೆ. ಸುಂದರವಾದ ವ್ಯಕ್ತಿಯಿಂದಾಗಿ ಓಲಾಡಿ ನಂತರ ಮುರಿದ ಹೃದಯವುಳ್ಳವರಾಗಿರುವ ಯೌವನಸ್ಥ ಸ್ತ್ರೀಯರಿದ್ದಾರೆ.

ದೇವರು ತನ್ನ ತೀರ್ಪನ್ನು ಮೇಲ್ನೋಟ ಅಥವಾ ಹೊರಗಣ ಸಂಗತಿಗಳ ಮೇಲೆ ಆಧಾರಗೊಳಿಸುವದಿಲ್ಲ. ಅವನು ಹೃದಯವನ್ನು ನೋಡುತ್ತಾನೆ (ಗಮನಿಸಿ 1 ಅರಸು 8:39; 1 ಪೂರ್ವಕಾಲ 28:9; ಲೂಕ 16:15). ಒಬ್ಬರು ಹೀಗೆ ಹೇಳಿದ್ದಾರೆ - "ನ್ಯಾಯಾಧೀಶನೊಬ್ಬ ತನ್ನ ನ್ಯಾಯಾಧೀಶನಿಗೆ *ಹೇಗೆ* ನ್ಯಾಯ ತೀರಿಸಬೇಕೆಂದು ಹೇಳಿಕೊಟ್ಟನು."[17] ದೇವರು ನಮಗೆ ನ್ಯಾಯ ಕೊಡುವದನ್ನು ಕಲಿಸುತ್ತಾನೆ. ಯೇಸು ಹೇಳಿದ್ದಾನೆ, "ಕಣ್ಣಿಗೆ ತೋಲಿದ್ದರ ಮೇಲೆ ತೀರ್ಪು ಮಾಡಬೇಡಿರಿ; ನ್ಯಾಯವಾದ ತೀರ್ಪು ಮಾಡಿರಿ" (ಯೋಹಾನ 7:24).[18]

ಇಷಯನ ತನ್ನ ಎರಡನೇಯ ಮಗ ಅಬಿನಾದಾಬನನ್ನು ಕರೆದನು, ನೀಳವಾ ಗಿಯೂ ಸುಂದರನಾಗಿಯೂ ಇದ್ದನು. ಸಮುವೇಲನು ತನ್ನ ತಲೆಯನ್ನು ಅಲುಗಾಡಿಸಿ, "ಯೆಹೋವನು ಇವನನ್ನೂ ಆರಿಸಿಕೊಳ್ಳಲಿಲ್ಲ" (16:8). ನಂತರ ಮೂರನೆಯ ಮಗ ಶಮ್ಮನ ಸರದಿ. ಪ್ರತಿಕ್ರೀಯೆಯು ಅದೇ ಆಗಿತ್ತು: "ಯೆಹೋವನ ಇವನನ್ನೂ ಆರಿಸಿಕೊ ಳ್ಳಲಿಲ್ಲ" (16:9). ಒಬ್ಬರಾದ ಮೇಲೆ ಒಬ್ಬರು ಬಂದರು: ನೆತನೇಲ್ ... ರದ್ದೈ ... ಓಚೆಮ್ (1 ಪೂರ್ವಕಾಲ 2:14, 15). ಇಷಯನ ಏಳು ಪುತ್ರರು ಸಮುವೇಲನ ಎದುರು ಹಾದು ಹೋಗುವ ತನಕ - ಎಲ್ಲರೂ ಸುಂದರರು, ಅರಸನಾಗುವದಕ್ಕೆ ಉತ್ತಮ ಅಭ್ಯರ್ಥಿಗಳು. ಆದರೆ ನಿರ್ಣಯವು, "ಯೆಹೋವನು ಇವರನ್ನು ಆರಿಸಿಕೊಳ್ಳಲಿಲ್ಲ" (16:10).

ಸಮುವೇಲನು ಗಲಿಬಿಲಿಗೊಂಡನು. ಇಷಯನ ಮಕ್ಕಳಲ್ಲಿಯೇ ಒಬ್ಬನನ್ನು ಆರಿಸಿ ತೆಗೆದುಕೊಂಡಿದ್ದೇನೆ ಎಂದು ದೇವರು ಹೇಳಿದ್ದನು (16:1), ಮತ್ತು ಇಷಯನ ಎಲ್ಲಾ ಪುತ್ರರು ಯಜ್ಞಕೆ ಆಹ್ವಾನಿಸಲ್ಪಟ್ಟಿದ್ದರು. ಸಮುವೇಲನು ಇಷಯನನ್ನು ಕೇಳಿದನು, "ನಿನ್ನ ಮಕ್ಕಳೆಲ್ಲಾ ಇಷ್ಟೇ ಮಂದಿಯೋ?" (16:11ಎ; ಒತ್ತಿ ಹೇಳಿದ್ದು ನನ್ನದು). "ಇವರೆಲ್ಲರಿಗಿಂತಲೂ ಚಿಕ್ಕವನು ಒಬ್ಬನಿರುತ್ತಾನೆ; ಅವನು ಕುರಿ ಮೇಯಿಸುವದಕ್ಕೆ ಹೋಗಿದ್ದಾನೆ" ಎಂದು ಇಷಯನು ಉತ್ತರಿಸುವಾಗ ನಾಚಿಕೊಂಡಿರಬೇಕು (16:11ಬಿ). ಇಬ್ರಿಯ ಪಂಡಿತರು ಹೇಳುವ ಪ್ರಕಾರ "ಚಿಕ್ಕವನು" ಕೊನೆಯಲ್ಲಿ ಜನಿಸಿದವನು ಎಂದು ಮಾತ್ರ ಸೂಚಿಸದೇ, ಕಡಿಮೆ ದರ್ಜೆಯನ್ನೂ ಸೂಚಿಸುತ್ತಿತ್ತು.

ದಾವೀದನು ಔತಣಕ್ಕೆ ಯಾಕೆ ಆಹ್ವಾನಿಸಲ್ಪಡಲಿಲ್ಲ? ಕುರಿಗಳನ್ನು ಮೇಯಿ ಸುವದಕ್ಕೆ ಇನ್ನೊಬ್ಬನನ್ನು ಕೆಲಸಕ್ಕೆ ನೇಮಿಸುವದು ಅನಾನುಕೂಲವಾಗಿರಬಹುದು, ಆದರೆ ಈ ವಿಶೇಷ ದಿನಕ್ಕಾಗಿ ಮಾಡಬಹುದಿತ್ತು (ಗಮನಿಸಿ 1 ಸಮುವೇಲ 17:20). *ಎಲ್ಲಾ ಪುತ್ರರು*

ಆಹ್ವಾನಿಸಲ್ಪಟ್ಟರು. ಇಷಯನು ದಾವೀದನನ್ನು ಯಾಕೆ ತರಲಿಲ್ಲ?[19]

ಬಹುಶಃ ದಾವೀದನು ಬಹಳ ವಿಭಿನ್ನನಾಗಿದ್ದನು. ಅವನು "ಕೆಂಬಣ್ಣನೂ" ಎಂದು ಕರೆಯಲ್ಪಟ್ಟಿದ್ದಾನೆ (16:12). "ಕೆಂಬಣ್ಣ" ಕೆಂಪು ಬಣ್ಣಕ್ಕೆ ಇಬ್ರಿಯ ಪದವಾಗಿದೆ; ಕೆಂಪು ಕೂದಲ್ಲಿದ ಎಸಾವನಿಗೂ ಇದೇ ಪದ ಉಪಯೋಗಿಸಲ್ಪಟ್ಟಿದೆ (ಆದಿಕಾಂಡ 25:25). ಅವನ ಪೂರ್ವಜರ ವಂಶವಾಹಿಯು ದಾವೀದನ ದೈಹಿಕ ರಚನೆಯಲ್ಲಿ ತೋರಿ ಬಂದಿರಬಹುದು.[20] "ಕೆಂಬಣ್ಣ" ಅಂದರೆ ದಾವೀದನು ಮುಖದವನಾಗಿರಬಹುದು. ಹೇಗಿದ್ದರೂ ಅವನಲ್ಲಿ ಯೆಹೂದ್ಯರಿಗಿರ ಬೇಕಾದ ಪರಿಪೂರ್ಣ ಅಚ್ಚು ಇರಲಿಲ್ಲ.

ದಾವೀದನು ನೋಡುವದಕ್ಕೆ ವಿಭಿನ್ನನಾಗಿದ್ದನು; ಅವನು ಬೇರೆ ರೀತಿಯಾಗಿ ವರ್ತಿಸಿದನು. ಅವನು ನಿಜವಾದ ಪುರುಷನಂತೆ ವರ್ತಿಸಲಿಲ್ಲ. ಅವನು ಕವಿತೆಗ ಳನ್ನು ಬರೆದನು, ಮತ್ತು ಕಿನ್ನರಿಯನ್ನು ಬಾರಿಸುತ್ತಿದ್ದನು![21] ವಿಭಿನ್ನನಾಗಿರುವದು ಅಪಾಯಕಾರಿಯಾಗಿದೆ.

ನಾನು ದಾವೀದನ ಕುರಿತು ಆಲೋಚಿಸುವಾಗ, ಒಂದು ವಾಕ್ಯ ನನ್ನ ನೆನಪಿಗೆ ಬರುತ್ತದೆ, "ಮರಿಗಳ ಗುಂಪಿನಲ್ಲಿ ಬೇಡವಾದದ್ದು." ತಾಯಿ ನಾಯಿಗೆ ಒಂದೇ ಬಾರಿ ಹಾಲುಣಿಸಲು ಆಗದಷ್ಟು ಹೆಚ್ಚು ಮರಿಗಳಿರುವಾಗ, ಅತಿ ಚಿಕ್ಕ ಮರಿಯು ಬದಿಗೆ ಸರಿಸಲ್ಪಡುತ್ತದೆ. ದೊಡ್ಡ ಮರಿಗಳ ಹೊಟ್ಟೆ ತುಂಬಿದ ನಂತರ ಬಿಡಲ್ಪಡ ಹಾಲು ಕುಡಿದು ಅದು ಜೀವಿಸುತ್ತದೆ ಹೆಚ್ಚಾಗಿ ಈ ಮರಿಯು ತುಂಬಾ ಸುಂದರವಾಗಿಯೂ ಮತ್ತು ಬಲವುಳ್ಳದ್ದಾಗಿಯೂ ಇರುತ್ತದೆ ಆದರೆ ಅದಕ್ಕೆ "ಬೇಡವಾದದ್ದು" ಎಂಬ ಕಳಂಕವಿರುತ್ತದೆ.

ದಾವೀದನಿಗೆ ವಸ್ತ್ರವಿತ್ತು ಮತ್ತು ಆಹಾರವಿತ್ತು, ಆದರೆ ತನ್ನ ಕುಟುಂಬದಿಂದ ಪ್ರೀತಿ, ಗೌರವ, ಮತ್ತು ಮೆಚ್ಚುಗೆಯ ವಿಷಯ ಬಂದಾಗ - ಪ್ರತಿಯೊಂದು ಮಗುವಿಗೆ ಬೇಕಾ ಗುವ ಪೋಷಣೆ - ಅವನು ಒಂದು ಬದಿಗೆ ತಳ್ಳಲ್ಪಟ್ಟನು. "ನನ್ನ ತಂದೆಯು ಮತ್ತು ನನ್ನ ತಾಯಿಯೂ ನನ್ನನ್ನು ತೊರೆದುಬಿಟ್ಟರೇನು ಯೆಹೋವನು ನನ್ನನ್ನು ಸೇರಿಸಿಕೊಳ್ಳು ವನು" (ಕೀರ್ತನೆ 27:10) ತರುವಾಯ ದಾವೀದನು ಹೇಳಿದನು. ದಾವೀದನು ತನ್ನ ಕುಟುಂಬದಿಂದ ತೊರೆಯಲ್ಪಡುವ ಅನುಭವ ಅವನಿಗಿರದಿದ್ದರೆ ಅವನು ಯಾಕೆ ಇಂಥ ಮಾತುಗಳನ್ನು ಬರೆಯುತ್ತಿದ್ದನು?[22] ಹೆತ್ತವರಾಗಿ ನಮ್ಮ ಮಕ್ಕಳನ್ನು ನಾವು ಪ್ರೀತಿಸಿ ಮತ್ತು ಮೆಚ್ಚುತ್ತೇವೆ ಎಂದು ಅವರಿಗೆ ತಿಳಿಸುವಂತೆ ನಮಗೆ ದೇವರೇ ಸಹಾಯ ಮಾಡಬೇಕು - ಪಕ್ಷಪಾತ ದೂರವಿಡೋಣ!

ಇಷಯನು ದಾವೀದನನ್ನು ಯಾಕೆ ಔತಣಕ್ಕೆ ಕರೆತರಲಿಲ್ಲವೋ ನಮಗೆ ಗೊತ್ತಿಲ್ಲ,[23] ಆದರೆ ಒಂದು ಸಂಗತಿ ಎದ್ದು ಕಾಣುತ್ತದೆ: ತನ್ನ ಹಿರಿಯ ಮಕ್ಕಳಿಗಿಂದ ಹೆಚ್ಚು ತನ್ನ ಚಿಕ್ಕ ಮಗನ ಕುರಿತು ಇಷಯನು ಆಲೋಚಿಸುತ್ತಿರಲಿಲ್ಲ. ದಾವೀದನು ಹಿಂದುಗಡಯ ಹುಲ್ಲು ಗಾವಲಿನಲ್ಲಿ ಬಿಡಲ್ಪಟ್ಟಿದ್ದನು.

ಸಮುವೇಲನು ಒಬ್ಬ ಅಸಮಾಧಾನಗೊಂಡ ನ್ಯಾಯಾಧೀಶನಾಗಿದ್ದನು! ಇಷಯನಿಗೆ ಅಪ್ಪಣೆ ಕೊಟ್ಟನು, "ಅವನನ್ನು ಕರೆ ಕಳುಹಿಸು; ಅವನು ಬರುವವರೆಗೂ ನಾವು ಊಟಕ್ಕೆ ಕೂತುಕೊಳ್ಳಬಾರದು" (16:11ಸಿ).

ಒಬ್ಬ ಸಂದೇಶಕನು ಓಡುತ್ತಾ ಬಂದಾಗ ದಾವೀದನಿಗಾದ ಆಶ್ಚರ್ಯವನ್ನು ಆಲೋಚಿಸಿರಿ. "ದಾವೀದನೇ ದಾವೀದನೇ," ಸಂದೇಶಕನು ಏದುಸಿರು ಬಿಡುತ್ತಾ ಹೇಳಿದನು, "ನೀನು ಔತಣಕ್ಕೆ ಬರಬೇಕಂತೆ!"

ದಾವೀದನು ತನ್ನ ಕಿವಿಗಳನ್ನು ನಂಬಲು ಆಗಲಿಲ್ಲ. "ಆದರೆ ಕುರಿಗಳ ಗತಿಯೇನು?"

"ಕುರಿಗಳ ವಿಷಯ ನೀನು ಚಿಂತಿಸಬೇಡ. ಅವು ಚೆನ್ನಾಗಿರುತ್ತವೆ."[24]

"ಸರಿ, ನಾನು ಸ್ನಾನ ಮಾಡಿ, ಬೇರೆ ವಸ್ತ್ರಗಳನ್ನು ಧರಿಸಿಕೊಂಡು ನಿನ್ನ ಸಂಗಡ ಬರುವೆನು."

"ಇಲ್ಲ. ನೀನು *ಈಗಲೇ* ಬರಬೇಕು. ನೀನು ಅಲ್ಲಿ ಬರದ ಹೊರತು ಯಾರೂ ಊಟಕ್ಕೆ ಕೂತುಕೊಳಬಾರದೆಂದು ಅಪ್ಪಣೆಯಾಗಿದೆ!"

ದಾವೀದನು ಧೂಳಿನಿಂದಲೂ, ಬೆವರಿನಿಂದಲೂ ಕೂಡಿದವನಾಗಿ, ಕುರುಬನ ವಸ್ತ್ರಗಳಲ್ಲಿಯೇ ಕುರಿಗಳ ವಾಸನೆ ಬೀರುತ್ತಾ ಔತಣಕ್ಕೆ ಬಂದನು - ಆದಾಗ್ಯೂ ಅವನಲ್ಲಿ ಏನೋ ವಿಶೇಷತೆಯಿತ್ತು. "ಅವನು ಕೆಂಬಣ್ಣದವನೂ, ಸುಂದರ ನೇತ್ರನೂ ನೋಟಕ್ಕೆ ರಮಣೀಯನೂ ಆಗಿದ್ದನು" (16:12ಎ). ಆದರೆ ದಾವೀದನ ಸೌಂದರ್ಯ, ದೇವರು ಅವನನ್ನು ಆಯ್ದುಕೊಳ್ಳುವಂತೆ ಮಾಡಲಿಲ್ಲ. ಅದು ಅವನ ಹೃದಯವಾಗಿತ್ತು; ದೇವರು ತನ್ನ ಹೃದಯಕ್ಕೆ ಒಪ್ಪುವ ಮನುಷ್ಯನನ್ನು ಕಂಡುಕೊಂಡಿದ್ದನು. ಯೆಹೋವನು ಸಮು ವೇಲನಿಗೆ, "ಎದ್ದು ಇವನನ್ನು ಅಭಿಷೇಕಿಸು. ನಾನು ಆರಿಸಿಕೊಂಡವನು ಇವನೇ" (16:12ಬಿ).

ಸಮುವೇಲನು ದಾವೀದನಿಗೆ ತನ್ನ ಮುಂದೆ ಮೊಣಕಾಲೂರಲು ಹೇಳಿದನು. ತನ್ನ ಕೊಂಬನ್ನು ದಾವೀದನ ತಲೆಯ ಮೇಲೆ ಹೊಯ್ದು, ಸುವಾಸನಾಯುಕ್ತ ಎಣ್ಣೆಯು ದಾವೀದನ ಕೂದಲಿನಲ್ಲಿ ಇಳಿದು ಅವನ ಕೆನ್ನೆಯಿಂದ ಅವನ ನಿಲುವಂಗಿ ಮತ್ತು ನೆಲದ ಮೇಲೆ ಹರಿದು ಬಂದಿತು (16:13ಎ). ಜೋಸೆಫಸ್ ಹೇಳುವಂತೆ, ಸಮುವೇ ಲನು ನಂತರ ಬಗ್ಗಿಕೊಂಡು ದಾವೀದನ ಕಿವಿಗಳಲ್ಲಿ ಹೀಗೆ ಪಿಸುಗುಟ್ಟಿದನು, "ನೀನು ಮುಂದಿನ ಅರಸನು."[25] ಆ ರೀತಿಯಾಗಿ ಆಯಿತೋ ಇಲ್ಲವೋ, ಆದರೆ ಏನೋ ವಿಶೇಷ ವಾದದ್ದು ಆಯಿತು.[26]

"ಕೂಡಲೆ ಯೆಹೋವನ ಆತ್ಮವು ದಾವೀದನ ಮೇಲೆ ಬಂದು ನೆಲೆಗೊಂಡಿತು" (16:13ಬಿ). ಹಳೆ ಒಡಂಬಡಿಕೆಯ ಕಾಲದಲ್ಲಿ ಇನ್ನೂ ಪರಿಶುದ್ಧಾತ್ಮನ ತತ್ವವು ಇರಲಿಲ್ಲ, ಆದುದರಿಂದ ಇದು ತ್ರೈಯೈಕ ದೇವರ ಮೂರನೇಯ ವ್ಯಕ್ತಿಯಾಗಿರದೇ, ದೇವರ ಆತ್ಮವೇ ಆಗಿತ್ತು. ಆ ಗಳಿಗೆಯಿಂದ, ದೇವರು ದಾವೀದನೊಂದಿಗೆ ವಿಶೇಷವಾದ ರೀತಿಯಿಂದ ಇದ್ದನು.[27] ದಾವೀದನು ತನ್ನ ಕೀರ್ತನೆಗಳಲ್ಲಿ ಬರೆಯುವಂತೆ, ಒಂದು ಪರಿಣಾಮವೇ ನೆಂದರೆ - ದೇವರ ಮಾರ್ಗದರ್ಶನ (2 ಸಮುವೇಲ 23:1, 2).

ವಚನ 13ರ ಪ್ರಕಾರ, "ಸಮುವೇಲನು, ಅವನನ್ನು ಅವನ ಸಹೋದರರ ಮಧ್ಯದಲ್ಲೇ ಅಭಿಷೇಕಿಸಿದನು." ಅವನ ಸಹೋದರರಿಗೆ ಅಲ್ಲಿ ಏನು ನಡೆಯಿತ್ತೆಂಬುದರ ಪೂರ್ಣ ಮಹತ್ವ ತಿಳಿದಿರಲಿಕ್ಕಿಲ್ಲ. ಮೊದಲು ಒಂದೇ ಬಾರಿ ಒಬ್ಬನು ಅರಸನಾಗಿ ಅಭಿಷೇಕಿಸಲ್ಪಟ್ಟಿದ್ದನು. ಮತ್ತು ಅದು ಖಾಸಗಿಯಾದ ಆಚರಣೆಯಾಗಿತ್ತು (ಹೋಲಿಸು 1 ಸಮುವೇಲ 10:1). ಆದರೆ "ಬೇಡವಾದವನು" ತಮ್ಮ ಮೇಲೆ ಯಾವದೋ ಗೌರವಕ್ಕೆ ಆಯ್ಕೆಯಾಗಿದ್ದಾನೆಂದು ಮಾತ್ರ ತಿಳಿಯಿತು.[28]

ಅವನ ಕಾರ್ಯ ತೀರಿತು, ಸಮುವೇಲನು ಮನೆಗೆ ತೆರಳಿದನು (16:13).

ದಾವೀದನೇನು ಮಾಡಿದನು? ಕಿರೀಟಗಳನ್ನು ಮತ್ತು ನಿಲುವಂಗಿಗಳನ್ನು ಧರಿಸಲು ಪ್ರಾರಂಭಿಸಿದನೋ? ಹೊಸ ವ್ಯಾಪಾರದ ಕಾರ್ಡಗಳನ್ನು ಮುದ್ರಿಸಿ: "ಕುರುಬ" ಕಿತ್ತು ಹಾಕಿ ಮತ್ತು "ಅರಸ" ಎಂದು ಬರೆದನೋ? ಕುಟುಂಬದ ರಥವನ್ನು ಹೊಳೆಯುವಂತೆ ಮಾಡಿ, ಬೀದಿಗಳಲ್ಲಿ ಓಡಿಸಿ, "ನಾನು ನಿಮ್ಮ ಹೊಸ ಅರಸನು"?[29] ಎಂದು ಕೂಗಲಿಲ್ಲ, ಇಲ್ಲ ದಾವೀದನು ತನ್ನ ಕುರಿಗಳ ಬಳಿಗೆ ಹೋದನು. ಸೌಲನು ನಂತರ ಅವನನ್ನು ಕರೇ ಕಳುಹಿಸಿದಾಗ, ಇಷಯನಿಗಿದ್ದ ಸಂದೇಶವು "ಕುರಿಗಳನ್ನು ಮೇಯಿಸಿತ್ತಿರುವ ನಿನ್ನ ಮಗನಾದ ದಾವೀದನನ್ನು ನನ್ನ ಬಳಿಗೆ ಕಳುಹಿಸು" (16:19). ಸೌಲನಿಗಾಗಿ ಅವನು ಕಿನ್ನರಿ ಬಾರಿಸುತ್ತಾ ಇರುವಾ ಗಲೂ, ಅವನು "ತನ್ನ ತಂದೆಯ ಕುರಿಗಳನ್ನು ಮೇಯಿಸುವದಕ್ಕೋಸ್ಕರ ಬೇತ್ಲೆಹೇಮಿಗೆ ಹೋದನು" (1 ಸಮುವೇಲ 17:15; 1 ಸಮುವೇಲ 17:20, 28).

ದಾವೀದನು ಅರಸನಾಗಿ ಅಭಿಷೇಕಿಲ್ಪಟ್ಟನು; ಅವನು ಅರಸನಾಗಿ ಆರಿಸಲ್ಪಟ್ಟನು, ಆದರೆ ಅವನು ದೇವರ ಹೃದಯಕ್ಕೆ ಒಪ್ಪುವ ಮನುಷ್ಯನಾಗಿದ್ದನು. ಅವನು ದೇವರ ಸಮಯಕ್ಕಾಗಿ ಮತ್ತು ದೇವರ ಸ್ಥಳಕ್ಕಾಗಿ ಕಾಯುವದಕ್ಕೆ ಸಿದ್ಧನಿದ್ದನು. ಅವನು ತನ್ನ ಕುರಿಗಳ ಬಳಿಗೆ ಹೋದನು.

ನಾವು ದೇವರ ಸನ್ನಿಧಿಯಲ್ಲಿ ತಾಳ್ಮೆಯಿಂದ ಕಾಯುವದನ್ನು ಕಲಿಯಬೇಕು. ನಾವು

ಕಲಿಯಲು ಎಂಥಾ ಪ್ರಾಮುಖ್ಯವಾದ ಪಾಠ; ಎಂಥಾ *ಕಷ್ಟಕರವಾದ* ಪಾಠ! ನಾವು ದೇವರಿಂದ ಉಪಯೋಗಿಸಲ್ಪಡುವಂತೆ ನಮ್ಮನ್ನು ಸಿದ್ಧ ಮಾಡಿಕೊಳ್ಳೋಣ ನಂತರ ಕಾಯುವದನ್ನು ಕಲಿಯೋಣ.

## ಆರಾಧಿಸುವದನ್ನು ಕಲಿತ ಒಬ್ಬ ಗಾಯಕ

ಒಬ್ಬ ಕುರುಬ ಅರಸನಾಗಿ ಆಯ್ಕೆಯಾದವನು, ಹುಲ್ಲು ಗಾವಲಿನಿಂದ ಸಿಂಹಾಸನಕ್ಕೆ ಆದ ಬದಲಾವಣೆಯನ್ನು ಹೇಗೆ ಸ್ವೀಕರಿಸಿದನು? ಸಾಮಾನ್ಯವಾಗಿ, ಒಬ್ಬ ಕುರುಬ ಅರಮನೆಯ ಒಳಗೆ ಹೋಗಿ ನೋಡುವದಕ್ಕೆ ಸಾಧ್ಯವಿಲ್ಲ, ಆದರೆ ದೇವರು ಆಶ್ಚರ್ಯಕರವಾಗಿ ಕಾರ್ಯ ಮಾಡುತ್ತಾನೆ. ಹದಿನಾರನೇ ಆಧ್ಯಯದ ಕೊನೆಯಲ್ಲಿ ದೇವರು ಇದನ್ನು ಹೇಗೆ ಮಾಡಿದನು ಎಂದು ಬರೆದಿದೆ.

ಒಬ್ಬ ಕುರಿಕಾಯುವ ಹುಡುಗನಾಗಿ, ದಾವೀದನು ಒಂದು ತಲಾಂತನ್ನು ಅಭಿವೃದ್ಧಿಗೊಳಿಸಿದ್ದನು: ಅವನು ಕುರಿ ಮೇಯಿಸುವ ಸಮಯದಲ್ಲಿ ಹಾಡುವದನ್ನು ಮತ್ತು ಕಿನ್ನರಿ ಬಾರಿಸುವದನ್ನು ಕಲಿತಿದ್ದನು.

ಕುರಿಕಾಯುವ ಕೆಲಸವು ಬಹು ಬೇಸರದ ಕೆಲಸವಾಗಿತ್ತು. ಅದು ಅನೇಕ ಬೇಸರದ ತಾಸುಗಳನ್ನೊಳಗೊಂಡಿತ್ತು. ಒಮ್ಮೆ ಕುರಿಗಳು ಹುಲ್ಲುಗಾವಲಿನಲ್ಲಿ ಸುರಕ್ಷಿತವಾಗಿ ಬಂದ ಮೇಲೆ, ಬೆಟ್ಟದ ತಪ್ಪಲಿನಲ್ಲಿ ಸುಮ್ಮನೇ ಕುಳಿತು ಕುರಿಗಳನ್ನು ಗಮನಿಸುವದನ್ನು ಬಿಟ್ಟರೆ ಕುರುಬನಿಗೆ ಬೇರೆ ಯಾವ ಕೆಲಸವಿಲ್ಲ. ಕುರುಬರು ತಮ್ಮ ಮನೋರಂಜನೆಗಾಗಿ ಒಂದು ವಾದ್ಯಸಂಗೀತವನ್ನು ಕಲಿಯುವದು ಸಾಮಾನ್ಯವಾಗಿತ್ತು. ಬಹು ಜನರು ಕೊಳಲನ್ನು ಆಯ್ದುಕೊಳ್ಳುತ್ತಿದ್ದರು. ದಾವೀದನು ಒಂದು ತಂತಿ ವಾದ್ಯವನ್ನು ಆಯ್ದುಕೊಂಡನು. NASB ಇತರ ಭಾಷಾಂತರದಲ್ಲಿ ಅದನ್ನು "ಕಿನ್ನರಿ" (16:23), ಮತ್ತು ಇನ್ನೂ ಕೆಲವು "lyre" (ನೋಡಿರಿ RSV) ಕಡಿಮೆ ತಂತಿಗಳಿರುವ ಚಿಕ್ಕ ವಾದ್ಯ (ಇದು ಕಿನ್ನರಿ ಮತ್ತು ಗಿಟಾರಿನ ಮಧ್ಯದಲ್ಲಿರುವಂಥದ್ದು).

ಬಂಡೆಗಳ ಬೆಟ್ಟದ ತಪ್ಪಲಿನಲ್ಲಿ ಒಂಟಿ ದಿನಗಳಲ್ಲಿ ದಾವೀದನು ಕವನಗಳನ್ನು ಬರೆದು ಅದಕ್ಕೆ ಸಂಗೀತವನ್ನು ಜೋಡಿಸಿದನು. ನಂತರ ಅವನು ರಾಗ ಬಾರಿಸಿ ಹಾಡುತ್ತಿದ್ದನು. ದೇವರು ಅವನಿಗೆ ಉತ್ತಮ ಸ್ವರದಿಂದ ಮತ್ತು ಸಂಗೀತದ ತಲಾಂತಿನಿಂದ ಆಶೀರ್ವದಿಸಿದ್ದನು, ಮತ್ತು ದಾವೀದನು ಆ ತಲಾಂತನ್ನು ಅಭಿವೃದ್ಧಿಗೊಳಿಸಿದ್ದನು. ಈ ವಿಷಯವನ್ನು ನಾವು ಈ ಅಧ್ಯಾಯವನ್ನು ಧ್ಯಾನ ಮಾಡುವಾಗ ಅವಶ್ಯವಿರುವದರಿಂದ ನಿಮ್ಮ ಮನಸ್ಸಿನಲ್ಲಿಟ್ಟುಕೊಳ್ಳಿರಿ.

"ಯೆಹೋವನ ಆತ್ಮವು ಸೌಲನನ್ನು ಬಿಟ್ಟು ಹೋಯಿತು" ಎಂದು ವಚನ 14 ಪ್ರಾರಂಭವಾಗುತ್ತದೆ. ಹದಿನಾರನೇಯ ಅಧ್ಯಾಯದ ಕೊನೆಯ ಅರ್ಧ ಭಾಗವು ದಾವೀದ ಮತ್ತು ಸೌಲರ ವಿಭಿನ್ನತೆಯನ್ನು ತೋರಿಸುತ್ತದೆ. ದೇವರು ಒಪ್ಪಿದ ಮುಂದಿನ ಅರಸನು ಅವನು ಎಂದು ತೋರಿಸುವಂತೆ, ಯೆಹೋವನ ಆತ್ಮವು ದಾವೀದನ ಮೇಲೆ ನೆಲೆಗೊಂಡಿತ್ತು (16:13); ಸೌಲನು ಅರಸನೆಂದು ತಿರಸ್ಕರಿಸಲ್ಪಟ್ಟದ್ದರಿಂದ ಯೆಹೋವನ ಆತ್ಮವು ಅವನನ್ನು ಬಿಟ್ಟು ಹೋಯಿತು.[30]

ನಂತರ ಇನ್ನೊಂದು ಆಶ್ಚರ್ಯವುಂಟು ಮಾಡುವ ಮಾತನ್ನು ನೋಡುತ್ತೇವೆ: "ಯೆಹೋವನು ಕಳುಹಿಸಿದ ದುರಾತ್ಮವು ಬಂದು ಅವನನ್ನು ಪೀಡಿಸುತ್ತಿತ್ತು (ಅಂದರೆ, ಸೌಲನನ್ನು)" (16:14ಬಿ). "ದುರಾತ್ಮ" ಅಂದರೆ "ಪಾಪಾತ್ಮವಾದ" ಎಂದಲ್ಲ ಆದರೆ "ಶಿಕ್ಷಿಸುವ." ಹಳೇ ಒಡಂಬಡಿಕೆಯಲ್ಲಿ "ಕೆಟ್ಟ" ಎಂಬ ಪದವು ಶಿಕ್ಷೆಯನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿದೆ.[31] NKJV ಭಾಷಾಂತರದಲ್ಲಿ "ಪೀಡಿಸುವ ಆತ್ಮ" ಎಂದಿದೆ. "ಯೆಹೋವನಿಂದ" ಎಂದರೆ, ದೇವರು ತಾನೇ ಸ್ವತಃ ಸೌಲನನ್ನು ದಂಡಿಸಲು ಕಳುಹಿಸಿದಂತ ಆತ್ಮ ಅಥವಾ ಸೌಲನನ್ನು ಪೀಡಿಸಲು ಸೈತಾನನಿಗೆ ತನ್ನ ಒಬ್ಬ ಕೆಲಸದವನನ್ನು ಉಪಯೋಗಿಸಲು ದೇವರು

*ಅನುಮತಿ* ನೀಡಿರಬಹುದು (ಯೋಬನ ಜೀವನದಲ್ಲಿ ಆದಂತೆ). ಹೇಗಿದ್ದರೂ ದೇವರ ಉದ್ದೇಶ ಒಳ್ಳೆದಾಗಿತ್ತೆಂದು ನಾವು ಭರವಸೆಯುಳ್ಳವರಾಗಿರೋಣ. ಯೆಹೋವನೆಡೆಗೆ ಹಿಂತಿರುಗಿ ಬರುವಂತೆ ಸೌಲನು ಶಿಕ್ಷಿಸಲ್ಪಟ್ಟನು.[32]

ದುರಾತ್ಮವು ಸೌಲನ ಮೇಲೆ ಬರುವಾಗ, ಅದರ ಪರಿಣಾಮವು ಸುತ್ತಲಿದ್ದವರೆಲ್ಲರಿಗೆ ಕಂಡು ಬರುತ್ತಿತ್ತು (16:15). ಸೌಲನು ಯಾವಾಗಲೂ ಅಸ್ಥಿರನಾಗಿದ್ದನು, ಆದರೆ ದುರಾತ್ಮವು ಅವನ ಮನಃಸ್ಥಿತಿಯನ್ನು ಕೆರಳಿಸುತ್ತಿತ್ತು; ಆಳವಾದ ಖಿನ್ನತೆಗೆ ಅವನು ಹೆಚ್ಚು ಹೆಚ್ಚು ಗುರಿಯಾದನು. ಸೌಲನು ಸಲಹೆಗಾರರು ಈ ಸಲಹೆಯನ್ನು ಕೊಟ್ಟರು: "ಸ್ವಾಮೀ, ಅಪ್ಪಣೆಯಾಗಲಿ; ನಿನ್ನ ಸನ್ನಿಧಿಯಲ್ಲಿ ನಿಂತಿರುವ ನಿನ್ನ ಸೇವಕರಾದ ನಾವು ಹೋಗಿ ಕಿನ್ನರಿ ಬಾರಿಸುವವರಲ್ಲಿ ನಿಪುಣನಾದ ಒಬ್ಬನನ್ನು ಹುಡುಕಿ ತರುತ್ತೇವೆ. ಯೆಹೋವನಿಂದ ಕಳುಹಿಸಲ್ಪಟ್ಟ ದುರಾತ್ಮವು ನಿನ್ನ ಮೇಲೆ ಬರುವಾಗ ಅವನು ಬಾರಿಸಿದರೆ ನಿನಗೆ ಉಪಶಮನವಾಗುವದು" (16:16). "ಸಂಗೀತವು ಒಂದು ಕ್ರೂರ ಹೃದಯವನ್ನೂ ಸಮಾಧಾನಗೊಳಿಸಬಲ್ಲದು" ಎಂದು ಹೇಳಲಾಗಿದೆ ಅದು ಸೌಲನ ದಿನಗಳಲ್ಲಿ ನಿಜವಾಗಿತ್ತು ಮತ್ತು ನಮ್ಮ ದಿನಗಳಲ್ಲಿಯೂ ಅದು ನಿಜವಾಗಿದೆ.[33] ಅದು ಪ್ರಾಚೀನ ಸಂಗೀತದ ರಾಗದಿಂದ ಸಾಂತ್ವನಗೊಳ್ಳುವ ಒಬ್ಬ ವ್ಯಾಪಾರಿಯಿರಬಹುದು ಅಥವಾ ತನ್ನ ಮಗುವಿಗೆ ಜೋಗುಳ ಹಾಡುವ ತಾಯಿ ಇರಬಹುದು.

ಸೌಲನು ಒಬ್ಬ ಹತಾಶನಾದ ವ್ಯಕ್ತಿಯಾಗಿದ್ದನು. ಅವನು ಏನನ್ನೂ ಉಪಯೋಗಿಸಲು ಸಿದ್ಧನಿದ್ದನು. "ಚೆನ್ನಾಗಿ ಬಾರಿಸಬಲ್ಲವನಾದ ಒಬ್ಬನನ್ನು ನನಗೋಸ್ಕರ ಹುಡುಕಿಕೊಂಡು ಬನ್ನಿರಿ" (16:17).

ದಾವೀದನು ಕಿನ್ನರಿ ಬಾರಿಸುವ ಸಾಮರ್ಥ್ಯದ ಪರಿಚಯವಿದ್ದ, ದಾವೀದನ ವಯಸ್ಸಿನವನೇ ಆದ ಒಬ್ಬ ಯೌವನಸ್ಥನು ಹತ್ತಿರ ನಿಂತಿದ್ದು, ಸೌಲನು ಈ ಬೇಡಿಕೆಯನ್ನು ಕೇಳಿಸಿಕೊಂಡನು. ಅದೊಂದು ವಿಚಿತ್ರವಾದ ಕಾಕತಾಳಿಯವಾಗಿತ್ತಲ್ಲವೇ? ಇಲ್ಲ, ಅದೊಂದು ಕಾಕತಾಳೀಯವಾದ ಸಂಗತಿಯಾಗಿರಲಿಲ್ಲ. ಆದರೆ, ದೇವರು ತನ್ನ ಸುಚಿತ್ತದ ಮೇರೆಗೆ ಒಬ್ಬ ದೀನನಾದ ಕುರಿ ಕಾಯುವ ಹುಡುಗನು, ಅರಸನಾಗಿ ತಾನು ಹೇಗಿರಬೇಕು ಎಂದು ಕಲಿಯುವಂತೆ ಅರಮನೆಯೊಳಗೆ ತರುವದನ್ನು ಯೋಜಿಸುತ್ತಿದ್ದನು. ಆ ಯೌವನಸ್ಥನು, "ಬೇತ್ಲೆಹೇಮಿನ ಇಷಯನ ಮಗನನ್ನು ನೋಡಿದ್ದೇನೆ; ಅವನು ಚೆನ್ನಾಗಿ ಬಾರಿಸಬಲ್ಲವನೂ ಪರಾ ಕ್ರಮಶಾಲಿಯೂ ರಣಶೂರನೂ ವಾಕ್ಚತುರನೂ ಸುಂದರನೂ ಯೆಹೋವನ ಅನುಗ್ರಹವನ್ನು ಹೊಂದಿದವನೂ ಆಗಿದಾದ್ದನೆ" ಎಂದು ತಿಳಿಸಿದನು (16:18). ಅದು ಬಹು ಆಕರ್ಷಕವಾದ ಸಾರಾಂಶವಾಗಿತ್ತು.[34] ಪಟ್ಟಿಯಲ್ಲಿನ ಮೊದನೇಯದು ಬಹು ಪ್ರಾಮುಖ್ಯವಾದದ್ದೆಂದು ಸೌಲನು ಆಲೋಚಿಸಿದನು: ಅವನು "ಚೆನ್ನಾಗಿ ಬಾರಿಸಬಲ್ಲವನು." ಆದರೆ, ಬಹು ಪ್ರಾಮುಖ್ಯವಾದದ್ದು, ಕೊನೆಯ ಮಾತಾಗಿತ್ತು: "ಯೆಹೋವನ ಅನುಗ್ರಹವನ್ನು ಹೊಂದಿದವನು." ಸೌಲನಿಂದ ಯೆಹೋವನ ಆತ್ಮವು ಬಿಟ್ಟು ಹೋಗಿತ್ತು; ಅವನಿಗೆ ಅವನ ದೇವರು ಬೇಕಿತ್ತು.

ಸೌಲನು ತಕ್ಷಣವೇ ದಾವೀದನನ್ನು ಕರೇ ಕಳುಹಿಸಿದನು (16:19). ಹೋತದ ಮರಿ ಮತ್ತು ಕತ್ತೆಯ ಮೇಲೆ ರೊಟ್ಟಿ ಮತ್ತು ದ್ರಾಕ್ಷರಸವನ್ನು ಹೇರಿಸಿಕೊಂಡು ಸೌಲನ ಮನೆಗೆ ಬರುವದಕ್ಕೆ ಹುಡುಗನು ತಡಮಾಡಲಿಲ್ಲ (16:20). ಕೂಡಲೇ ದಾವೀದ ನು ಸೌಲನು ಸೇವೆ ಮಾಡುವದಕ್ಕೆ ಪ್ರಾರಂಭಿಸಿದನು (16:21).[35] "ದೇವರಿಂದ ಕಳುಹಿಸಲ್ಪಟ್ಟ ದುರಾತ್ಮವು ಸೌಲನ ಮೇಲೆ ಬಂದಾಗ ದಾವೀದನು ಕಿನ್ನರಿಯನ್ನು ಬಾರಿಸುವನು; ಅದರಿಂದ ದುರಾತ್ಮವು ಸೌಲನನ್ನು ಬಿಟ್ಟುಹೋಗುವದು; ಅವನು ಉಪಶಮನಹೊಂದಿ ಚೆನ್ನಾಗಿರುವನು" ಎಂದು 23ನೇ ವಚನ ಹೇಳುತ್ತದೆ. ದಾವೀದನ ಕಿನ್ನರಿಯ ಮೃದುವಾಗಿ ಸಂಗೀತವು ಸೌಲನ ಮನಸ್ಸನ್ನು ಸಮಾಧಾನಗೊಳಿಸಿದ್ದರಲ್ಲಿ ಯಾವ ಸಂಶಯವಿಲ್ಲ - ಆದರೆ ದಾವೀದನು ಬಾರಿಸುವಕ್ಕೂ ದುರಾತ್ಮವು ಬಿಟ್ಟು ಹೋಗು ವದಕ್ಕೆ ಯಾವ ಸಂಬಂಧವಿದೆ? ನಿಲ್ಲಿರಿ ಮತ್ತು ಆಲೋಚಿಸಿರಿ. ದಾವೀದನು

ರಚಿಸಿದ ಗೀತೆಗಳು ಯಾವವು? "ರಾತ್ರಿಯ ವೇಳೆಯಲ್ಲಿ ನಕ್ಷತ್ರಗಳು ದೊಡ್ಡದಾಗಿಯೂ ಮತ್ತು ಪ್ರಕಾಶಮಾನವಾಗಿಯೂ ಇರುತ್ತವೆ. ... ಯೆಹೂದದ ಹೃದಯದ ಆಳದಲ್ಲಿ?" ಅಥವಾ: "ಕಳ ಕೊಂಡೆ ನನ್ನ ಉತ್ಸುಕತೆಯನ್ನು ಹಕೀಲಾದ ಬೆಟ್ಟದಲ್ಲಿ" ಎಂದು ಬರೆದನೋ? (1 ಸಮುವೇಲ 23:19) ದಾವೀದನು ಧಾರ್ಮಿಕವಲ್ಲದ ಗೀತೆಗಳನ್ನು ಬರೆದನೋ, ನಮಗೆ ದಾಖಲೆಗಳಿಲ್ಲ.[36] ಅವನು ದೇವರ ಕುರಿತು ಮತ್ತು ಅವನ ಜೊತೆಗಿನ ಸಂಬಂಧದ ಕುರಿತು ಬರೆದನು:

> ನಿನ್ನ ಕೈಕೆಲಸವಾಗಿರುವ ಆಕಾಶಮಂಡಲವನ್ನು,
> ನೀನು ಉಂಟು ಮಾಡಿನ ಚಂದ್ರನಕ್ಷತ್ರಗಳನ್ನು ನಾನು ನೋಡುವಾಗ
> ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು
> ಯಾಕೆ ನೆನೆಸಬೇಕು?
> ಮಾನವನು ಎಷ್ಟರವನು ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು?
>
> ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ;
> ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ.
>
> ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ
> ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು; ...
> (ಕೀರ್ತ 8:3, 4; 19:1; 23:4).

ದಾವೀದನು ಕುರುಬನ ಜೀವಿತದ ಏಕಾಂಗಿತನದಲ್ಲಿ ಅನೇಕ ಸಂಗತಿಗಳನ್ನು ಕಲಿತನು; ಅವನು ಕಲಿತ ಬಹು ಪ್ರಾಮುಖ್ಯವಾದ ವಿಷಯ ದೇವರನ್ನು ಆರಾಧಿಸುವದು. ಕುರುಬನ ಹೊಲದ ಪ್ರಶಾಂತತೆಯಲ್ಲಿ, ದಾವೀದನು ದೇವರ ವಾಕ್ಯದ ಮತ್ತು ದೇವರ ಜಗತ್ತಿನ ಕುರಿತು ಆಲೋಚಿಸಿ ದೇವರ ಆರಾಧಕನಾದನು. ದೇವರ ಪ್ರಸನ್ನತೆಯಲ್ಲಿ ಬರುವದು ಅವನಿಗೆ ಉಸಿರಾಡುವಷ್ಟು ಸರಳವಾಗಿತ್ತು.

ಇಂದಿನ ನಮ್ಮ ಪ್ರಾಮುಖ್ಯವಾದ ಅವಶ್ಯಕತೆಯೇನೆಂದರೆ, ನಮ್ಮ ದೇವರನ್ನು ಆರಾಧಿಸುವದನ್ನು ಕಲಿಯುವಂಥಾದ್ದು (ಪುನಃ ಕಲಿಯುವಂಥಾದ್ದು) - ನಿಜವಾಗಿ ಆರಾಧಿಸುವದು. ಹೊಸ ಒಡಂಬಡಿಕೆಯಲ್ಲಿನ ಆರಾಧನಾ ಕ್ರಮವು ಹಳೆ ಒಡಂಬಡಿಕೆಯಲ್ಲಿನ ಆರಾಧನಾ ಕ್ರಮದಂತೆ ಇರುವದಿಲ್ಲ (ಉದಾಹರಣೆಗೆ, ಹೊಸ ಒಡಂಬಡಿಕೆಯ ಸಭೆಯಲ್ಲಿ ಕಿನ್ನರಿಯನ್ನು ಅಥವಾ ಇತರ ವಾದ್ಯ ಮೇಳವನ್ನು ಆರಾಧನೆಯಲ್ಲಿ ದಾವೀದನು ಉಪಯೋಗಿಸಿದಂತೆ ಉಪಯೋಗಿಸುತ್ತಿರಲಿಲ್ಲ) ಆದರೆ ಆರಾಧನೆಯ *ಕೇಂದ್ರ* ಅದೇ ಆಗಿತ್ತು. ಎಲ್ಲವನ್ನೂ ನಿರ್ಮಿಸಿದಾತನ ಕುರಿತು ನಮಗೆ ಪರಿಶುದ್ಧವಾದ ಗೌರವವಿರಬೇಕು. ಆತನ ಸಾರ್ವಭೌಮತ್ವದ ಎದುರು ದೀನತೆಯಿಂದ ತಗ್ಗಿಸಿಕೊಳ್ಳಬೇಕು, ಆತನ ಆಜ್ಞೆಗಳಿಗನುಸಾರವಾಗಿ ಪ್ರೀತಿ ಮತ್ತು ಆದರದಿಂದ ತುಂಬಿದ ಯಥಾರ್ಥವಾದ ಭಾವವಾಗಿರಬೇಕು. ಬಳಲಿ ಹೋಗುವ ಆತ್ಮಗಳನ್ನು ಚೈತನ್ಯಗೊಳಿಸಲು ಇಂದು ಅನೇಕರು ಚಮತ್ಕಾರಗಳಿಂದ ಪ್ರಚಾರಮಾಡುತ್ತಾರೆ, ಆದರೆ ನಾವು "ಇಸ್ರಾಯೇಲಿನ ಸುಂದರ ಕೀರ್ತನಗಾರನ" ಹೃದಯಪೂರ್ವಕ ಆರಾಧನೆಗೆ ಹಿಂತಿರುಗುವದು ಅವಶ್ಯವಿದೆ (2 ಸಮುವೇಲ 23:1).

ದಾವೀದನು ಹಾಡುಗಳು ಮತ್ತು ಬಾರಿಸುವದು ಸೌಲನಿಂದ ದುರಾತ್ಮವು ತೊಲಗುವಂತೆ ಯಾಕೆ ಮಾಡಿತು? ಯಾಕೆಂದರೆ ಸೌಲನು ತೊಂದರೆಯು ಮನಸ್ಸಿನ ವ್ಯಾಧಿಗಿಂತ ಆತ್ಮದ ವಾಧ್ಯಿಯಾಗಿತ್ತು. ದಾವೀದನು ದೇವರನ್ನು ಕುರಿತು ಹಾಡುವಾಗ, ಸೌಲನು ಹೃದಯವು ದೇವರ ಕುರಿತಾದ ಆಲೋಚನೆಗಳಿಂದ ಕ್ಷಣಹೊತ್ತು ತುಂಬಿಕೊಳ್ಳುತ್ತಿತ್ತು. ಆಗ ಪೀಡನೆಗೆ ಸ್ಥಳವಿರುತ್ತಿರಲಿಲ್ಲ.

ಮುಂದಿನ ಆಧ್ಯಾಯವು ಹೇಳುತ್ತದೆ, "ದಾವೀದನು ಸೌಲನಿಂದ ಹೊರಟು ಬೇತ್ಲೆಹೇಮಿಗೆ ತನ್ನ ತಂದೆಯ ಕುರಿಗಳನ್ನು ಮೇಯಿಸುವದಕ್ಕೆ ಹೋದನು" (1 ಸಮುವೇಲ 17:15). 1 ಸಮುವೇಲ 16:12 ಹೇಳುವಂತೆ, "ಸೌಲನು ಅವನನ್ನು ಬಹಳವಾಗಿ ಪ್ರೀತಿಸಿದನು." ದೈವಾನುಗ್ರಹಕ್ಕನುಗುಣವಾಗಿ, ಒಬ್ಬ ದೀನನಾದ ಕುರಿ ಕಾಯುವ ಹುಡುಗ ಅರಸನಿಗೆ ಸಮೀಪನಾದನು, ಒಂದು ದೇಶವನ್ನು ಆಳುವದು ಹೇಗೆ ಎಂದು ಕಲಿತುಕೊಂಡನು ಮತ್ತು ಅಧಿಕಾರದಲ್ಲಿರುವ ಜನರ ಆದರವನ್ನು ಗಳಿಸಿಕೊಂಡನು - ದಾವೀದನಿಗೋಸ್ಕರವಾಗಿ ದೇವರು ಹಾಕಿಕೊಂಡ ಯೋಜನೆಗಳಿಗೆ ಈ ಎಲ್ಲಾ ಅಂಶಗಳು ಪ್ರಾಮುಖ್ಯವಾಗಿದ್ದವು. ದೇವರ ಮಾರ್ಗಗಳು ಅದ್ಭುತವಾಗಲಿಲ್ಲವೇ?

## ಮುಕ್ತಾಯ

ಫ್ಲೊರೆನ್ಸ್‌ನಲ್ಲಿ ದಾವೀದನ ಪ್ರತಿಮೆಯನ್ನು ನಾನು ನೋಡಿದೆನೆಂದು ಈ ಪಾಠದ ಪ್ರಾರಂಭದಲ್ಲಿಯೇ ಹೇಳಿದ್ದೇನು. ಕಥೆ ಹೀಗಿದೆ, ದೇವಾಲಯದ ಕಾರ್ಯಗಾರದಲ್ಲಿ ತಿರಸ್ಕರಿಸಲ್ಪಟ್ಟ, ಒರಟಾಗಿರುವ ಒಂದು ದೊಡ್ಡ ಸಂಗಮವರಿಕಲ್ಲು ಮೈಕೆಲೆಂಜ ಲೋಗೆ ದೊರೆಯಿತು. ಜಾಗರೂಕನಲ್ಲದ ಒಬ್ಬ ಶಿಲ್ಪಿಯು ಒಂದು ಬದಿಯ ಒಂದು ಭಾಗವನ್ನು ಮುರಿದುಬಿಟ್ಟಿದ್ದನು. ಆ ಕಲ್ಲು ಹಾಳಾಯಿತು ಎಂದು ತಿಳಿದ ಅವನು ಅದನ್ನು ಒಗೆದು ಬಿಟ್ಟಿದ್ದನು. ಮೈಕೆಲೆಂಜಲೋ ಆ ಕಲ್ಲನ್ನು ತೆಗೆದುಕೊಂಡು, ನಿಪುಣತೆಯಿಂದ "ಹಾಳಾಗಿರುವ" ಬದಿಯ ವಕ್ರತೆಯನ್ನು ತನ್ನ ಆಕಾರದ ಹಿಂದಿನ ಬದಿಯ ವಕ್ರತೆಯನ್ನಾಗಿಸಿದನು. ಬೇಡವಾಗಿ ಬಿಡಲ್ಪಟ್ಟ ಕಲ್ಲಿನಿಂದ, ಮೈಕೆಲೆಸೆಂಜಲೋ, ತನ್ನ ಅದ್ಭುತ ಕೃತಿಯನ್ನು ಸೃಷ್ಟಿಸಿದನು, *ದಾವೀದ.*

ನೀವು ನಿಮ್ಮ ಜೀವನವು ಮಂಕಾಗಿರುವದಾಗಿಯೂ, ಉಪಯೋಗವಿಲ್ಲದಿರುವದಾಗಿಯೂ ಇದೆ ಎಂದು ನೀವು ತಿಳಿದುಕೊಂಡಿರಬಹುದು, ಆದರೆ ದೇವರ *"ಹೃದಯಕ್ಕೆ ಒಪ್ಪುವ"* ಪುರುಷ ಅಥವಾ ಸ್ತ್ರೀಯಾಗಿ ಪರಿವರ್ತಿತವಾಗುವದಕ್ಕೆ ತಡವಿಲ್ಲ. ದಾವೀದನಂತೆ ನೀವು ನಿಮ್ಮ ಹೃದಯಗಳನ್ನು ದೇವರಿಗೆ ಅರ್ಪಿಸುವದಾದರೆ, ದೇವರು ನಿಮ್ಮನ್ನು ಸ್ವೀಕರಿಸುತ್ತಾನೆ ಮತ್ತು ಮೃದುವಾದ, ನಿಪುಣ ಕೈಗಳಿಂದ, ತನ್ನ ಮಹಿಮೆಗಾಗಿ ಉಪಯುಕ್ತ ಪಾತ್ರೆಯಾಗಿ ರೂಪಿಸುತ್ತಾನೆ.

ನಾವು ಪ್ರತಿಯೊಬ್ಬರು ದಾವೀದನಂತೆ ದೇವರಾತ್ಮನು ನಮ್ಮ ಮೇಲೆ ನೆಲೆಸಬಹುದು ಅಥವಾ ಸೌಲನಂತೆ ಇರಬಹುದು (ಅಪೋಸ್ತಲರ ಕೃತ್ಯಗಳು 2:38; ಗಲಾತ್ಯ 4:6). ಅಥವಾ ನಿರ್ಗಮಿಸಬಹುದು. ಅದು ನಮ್ಮ ನಿರ್ಧಾರ.

---

ಟಿಪ್ಪಣಿಗಳು

[1]ದಾವೀದನು ಆಳತೊಡಗಿದಾಗ ಮೂವತ್ತು ವರ್ಷದವನಿರಬಹುದು (2 ಸಮುವೇಲ 5:4). ಸೌಲನು ನಾಲ್ವತ್ತು ವರ್ಷ ಆಳಿದನು (ಅಪೋಸ್ತಲನ ಕೃತ್ಯಗಳು 13:21). ಇದರ ಅರ್ಥ ದಾವೀದನು ಸೌಲನ ಆಳ್ವಿಕೆಯ ಹತ್ತನೆಯ ವರ್ಷದಲ್ಲಿ ಜನಿಸಿರಬಹುದು. ಪ್ರವಾದನಾ ರೂಪವಾಗಿ ಭೂತಕಾಲದಲ್ಲಿ 1 ಸಮುವೇಲ 13:14 ಬರೆದದೆ, ಇದು ಭವಿಷೇಯವನ್ನು ಭೂತಕಾಲದಲ್ಲಿ ಮಾತಾಡುತ್ತದೆ ಯಾಕೆಂದರೆ ದೇವರು ಏನೇನೋ ಹೇಳಬೇಕಾದರೆ, ಅದು ನಡೆದು ಹೋಯಿತು ಎಂಬ ರೀತಿಯಲ್ಲಿ ಖಚಿತವಾಗಿರುತ್ತದೆ. [2]ಪೆರೆಚನ ತಾಯಿ ತಾಮಾರಳು (ಆದಿಕಾಂಡ 38) [3]1 ಸಮುವೇಲ 17:12. ದಾವೀದನಿಗೆ ಬೇತ್ಲೆಹೇಮಿನ ವಿಷಯದವ್ವಿ ಒಂದು ಮೃದು ಧೋರಣೆಯಿತ್ತು, ತದನಂತರದಲ್ಲಿ ಅವನು ಅಲ್ಲಿನ ಬಾವಿನ ನೀರಿಗಾಗಿ ಹಾತೊರೆದನು (2 ಸಮುವೇಲ 23:15; 1 ಪೂರ್ವಕಾಲ 11:17). [4]1 ಸಮುವೇಲ 17:12-14 ಎಂಟು ಪುತ್ರರನ್ನು ನಮೂದಿಸುತ್ತದೆ ಮತ್ತು ದಾವೀದನು ಎಲ್ಲರಿಗಿಂತ ಚಿಕ್ಕವನು. ಯೆಹೂದದ ದಾಖಲೆಗಳಲ್ಲಿ 1 ಪೂರ್ವಕಾಲವೃತ್ತಾಂತ 2:13-15 ಕೇವಲ ಏಳು ಪುತ್ರರನ್ನು ನಮೂದಿಸುತ್ತದೆ. ಬಹುಶಃ ಒಬ್ಬನು ಚಿಕ್ಕವನಿರುವಾಗಲೇ ತೀರಿ ಹೋಗಿರಬಹುದು ಅಥವಾ ಮಕ್ಕಳಿಲ್ಲದೇ ತೀರಿಹೋಗಿರಬಹುದು.

1 ಪೂರ್ವಕಾಲವೃತ್ತಾಂತ 2:16, 17 ಇಬ್ಬರು ಸಹೋದರಿ ಯರ ಕತೆಯನ್ನು ಹೇಳುತ್ತದೆ. [5]"ದಾವೀದ" ಇದು, ಇಬ್ರಿಯ ಪದ *ದಾವೀದನಿಂದ* ಬಂದದ್ದು (ಗ್ರೀಕ ದಾಬಿದ್). ಕೆಲವರ ಪ್ರಕಾರ ದಾವೀದನ ಹೆಸರು "ಅವನ ಪ್ರೀಯನು" ಅಥವಾ "ಯೆಹೋವನ ಪ್ರೀಯನು" ಎಂಬ ಅರ್ಥ ಕೊಡುವ ಇಬ್ರಿಯ ಪದದ ಚಿಕ್ಕ ರೂಪ. ಬೈಬಲಿನಲ್ಲಿ ಈ ಹೆಸರನ್ನು ಪಡೆದಿಲ್ಲ. [6]ದಾವೀದನು ಕುರಿಗಳ ಪಾಲನೆ (ಉತ್ತಮ ಸ್ಥಿತಿಯಲ್ಲಿರುವ ಕುಟುಂಬಗಳಲ್ಲಿ ಸೇವಕರು ಮಾಡುವ ಕೆಲಸವಿದು) ಮಾಡಬೇಕಾದ ಪರಿಸ್ಥಿತಿಯನ್ನು ಸೇರಿಸಿ, ಕುಟುಂಹವು ಬಡತನದಲ್ಲಿತ್ತು ಎಂಬದಕ್ಕೆ ಇತರ ಸೂಚನೆಗಳಿವೆ: ದಾವೀದನು ಕಾಯುತ್ತಿದ್ದ ಹಿಂಡು ಚಿಕ್ಕದಾಗಿತ್ತು (1 ಸಮುವೇಲ 17:28), ಮತ್ತು ಸೌಲನಿಗೆ ಕಳಿಹಿಸಿದ ಬಹುಮಾನವು (ಅದೇ ಆಗಿದ್ದರೆ) ಅರಸನಿಗೆ ಕಳುಹಿಸುವದಕ್ಕಿಂತ ಸಾಧಾರಣವಾಗಿತ್ತು (1 ಸಮುವೇಲ 16:20). 1 ಸಮುವೇಲ 18:23 ನೋಡಿರಿ. [7]ಚಿಕ್ಕವನಿರುವಾಗ, ನಾನು ವಯ್ಸಕರೊಂದಿಗೆ ಕೆಲಸ ಮಾಡುವಾಗ, ನಾನು "ಕುಲ ಸ್ಥಂಭದಲ್ಲಿ ಕನಿಷ್ಠ ಮನುಷ್ಯನಾಗಿದ್ದೆನು", ಅದರಲ್ಲೂ ಕಠಿಣವಾದ, ಹೊಲಸಾದ ಕೆಲಸಗಳನ್ನು ಮಾಡುವಾಗ - ಗೋದಿಯ ಸುಗ್ಗಿ ಕಾಲದಲ್ಲಿ, ಹೊಟ್ಟು ಕೂಡಿಸುವ ಸಮಯದಲ್ಲಿ ಅಥವಾ ಇನ್ನಾವದೋ. ನಿಮ್ಮ ಅನುಭವದಲ್ಲಿ ಇಂಥದೇ ಉದಾಹರಣೆಗಳಿರಬಹುದು. [8]ನಂಬಿಕೆಯು ಬೆಳೆದದ್ದರಲ್ಲಿ ಯಾವ ಸಂಶಯವಿಲ್ಲ ಮತ್ತು ಕುರುಬನಾಗಿ ದಾವೀದನ ಹೊರಗಿನ ಜೀವನದಿಂದಾಗಿ ಅದು ಬಲಗೊಂಡಿತು. [9]ಕೆಲವೊಮ್ಮೆ ಕುರುಬರು ಒಟ್ಟಾಗಿ ಕೆಲಸ ಮಾಡುತ್ತಾರೆ (1 ಸಮುವೇಲ 25:16; ಲೂಕ 2:8; ಇತ್ಯಾದಿ). ಆದರೆ ಹೆಚ್ಚಾಗಿ ಅವರು ಒಬ್ಬರೇ ಕೆಲಸ ಮಾಡುತ್ತಾರೆ, ವಿಷೇಶವಾಗಿ ಹಿಂಡು ಚಿಕ್ಕದಾಗಿರು ವಾಗ. [10]ಹಾರಾಡುವದನ್ನು ವಿವರಿಸುವದಕ್ಕೆ ವಿಮಾನಚಾಲಕರು ಅದೇ ಮಾತುಗಳನ್ನು ಉಪಯೋಗಿಸುವದನ್ನು ಕೇಳಿದ್ದೇನೆ.

[11]Lynn Anderson, "The Heart of the Matter" (N.p., n.d.), sound cassette. [12]ದಾವೀದನಿಗೆ ಬೆಂಬಲಿಸಿದರೆಂದು ನಿರ್ಣಯಕ್ಕೆ ಬಂದು ನೋಬದಲ್ಲಿದ್ದ ಯಾಜಕರನ್ನು ಸೌಲನು ಕ್ರೂರವಾಗಿ ಕೊಂದು ಬಿಟ್ಟದ್ದರ ಪುರವೆಯಿದ್ದುದರಿಂದ, ಅವನ ಭಯವು ನ್ಯಾಯಯುತವಾಗಿತ್ತು (1 ಸಮುವೇಲ 22:6-19). [13]"ಪ್ರತಿಷ್ಠಿಸು" ಅಂದರೆ "ಬೇರ್ಪಡಿಸು." ಅವರು ಧಾರ್ಮಿಕವಾಗಿ ತಮ್ಮನ್ನು ಶುದ್ಧ ಪಡಿಸಿಕೊಳ್ಳ ಬೇಕಿತ್ತು ಮತ್ತು ತಮ್ಮ ಹೃದಯಗಳನ್ನು ಮತ್ತು ಜೀವನವನ್ನು ಯಜ್ಞಕ್ಕಾಗಿ ಸಿದ್ಧಗೊಳಿಸಬೇಕಿತ್ತು. [14]ಯಜ್ಞಕ್ಕೆ ಬರುವವರೆಗೆ, ಸಮುವೇಲನು ಇಷಯನ ಕುಟುಂಬವನ್ನು ನೋಡಿರಲಿಲ್ಲವಾದಿದ್ದರಿಂದ, ಸಮುವೇಲನ "ಪ್ರತಿಷ್ಠೆಯ ಕಾರ್ಯ" ಮತ್ತು ಇಷಯ ಮತ್ತು ಅವನ ಪುತ್ರರನ್ನು (1 ಸಮುವೇಲ 16:5) ಆಹ್ವಾನಿಸುವದು, ಅಲ್ಲಿದ್ದ ಅಧಿಕಾರಿಗಳ ಮೂಲಕವಾಗಿರಬೇಕು. [15]1 ಸಮುವೇಲ 17:13 ನೋಡಿರಿ, ನಂತರ ಹಿರಿಯ ಮಕ್ಕಳು ಅಬಿನಾದಾಬ ಮತ್ತು ಶಮ್ಮ ಎಂದು ತಿಳಿಸುತ್ತದೆ. [16]1 ಸಮುವೇಲ 16:7 ನೋಡಿರಿ: "ಅವನ ಎತ್ತರವು," ಮತ್ತು "ಹೊರಗಿನ ತೋಲಿಕೆಯ" (ನಿಜವಾಗಿಯೂ ಕಣ್ಣು, ಮುಖ). [17]Rick Atchley, "Here Comes the Judge" (N.p., n.d.), sound cassette. [18]ಕೆಲವರು ಮತ್ತಾಯ 7:1-5 ಸೂಚಿಸುತ್ತಾರೆ ಮತ್ತು ಕ್ರೈಸ್ತರ ಎಂದಿಗೂ ತೀರ್ಪು ಮಾಡಬಾರದೆಂದು ನಿರ್ಣಯಿಸುತ್ತಾರೆ. ಮತ್ತಾಯ 7:1 ಎಲ್ಲಾ ಮನುಷ್ಯ ನ್ಯಾಯತೀರ್ಪಿಗೆ *ವಿರುದ್ಧವಾಗಿಲ್ಲ* (ಮುಂದಿನ ವಚನ 6 ನ್ಯಾಯತೀರ್ಪನ್ನು ಸೂಚಿತ್ತದೆ). ಮತ್ತಾಯ 7:1, ff ಸಮುವೇಲನು ತೆಗೆದುಕೊಂಡು ತಕ್ಷಣದ ನ್ಯಾಯತೀರ್ಪಿಗೆ ವಿರುದ್ಧವಾಗಿದೆ. ಅದು ಅತಿ ಕಠೋರವಾದ ನ್ಯಾಯತೀರ್ಪಿಗೆ ವಿರುದ್ಧವಾಗಿದೆ. [19]ದಾವೀದನು ಬಹಳ ಒಳ್ಳೆಯವನಾಗಿದ್ದನೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇಷಯನಿಗೆ ಈಗಾಗಲೇ ಏಳು ಮಕ್ಕಳಿದ್ದರು ಮತ್ತು ಇನ್ನೂ ಪರಿಪೂರ್ಣವಾಗುವಂದೆ ಇಬ್ಬರು ಹೆಣ್ಣು ಮಕ್ಕಳಿದ್ದರು (ಯೆಹೂದ್ಯರ ಪ್ರಕಾರ ಏಳು ಸಂಪೂರ್ಣ ಸಂಖ್ಯೆಯಾಗಿದೆ). ದಾವೀದನು "ಅನಿರೀಕ್ಷಿತವಾದ ಆಶೀರ್ವಾದವಾಗಿದ್ದನು." [20]ದಾವೀದನ ಪೂರ್ವಜರು ಮೋವಾಬ್ಯಳಾದ ರೂತಳನ್ನು ಸೇರಿಸಿದ್ದರು. ಇತ್ಯಾದಿ.

[21]ಊಟದ ವ್ಮಣೆಯ ಸುತ್ತಲೂ ಕುಳಿತ ಕುಟುಂಬದ ಚಿತ್ರವನ್ನು ನೀವು ಚಿತ್ರಿಸಿಕೊಳ್ಳಬಹುದು. ಏಳು ಹಿರಿಯ ಪುತ್ರರು ತಮ್ಮ ಬಲದ ಕಾರ್ಯಗಳನ್ನು ಕುರಿತು ಮಾತಾಡುತ್ತಿರುವದು ಮತ್ತು ದಾವೀದನು ಹೀಗೆ ಹೇಳುವದು, "ನಾನು ಇಂದು ಈ ಕವನವನ್ನು ಬರೆದೆನು." [22]ಕೀರ್ತ 16:10 ಈ ಭಾಷಾಂತರಿಸಲ್ಪಟ್ಟಿದೆ, "ನನ್ನ ತಂದೆ ತಾಯಿಗಳು ತೊರೆದುಬಿಟ್ಟರೇನು ..." *ಆದರೆ* ನನ್ನ ಪ್ರಶ್ನೆ ಅದೇ ಉಳಿಯುತ್ತದೆ. ಇಬ್ಬರೂ ತಂದೆತಾಯಿಯ ಪ್ರೀತಿಯಿಂದ ಪೋಷಿಸಲ್ಪಟ್ಟ ಕುಟುಂಬದಲ್ಲಿ ಬೆಳೆದಿರುವ ನಾನು, ಅವರು ತೊರೆದುಬಿಡುವ ಸಾಧ್ಯತೆಯನ್ನು ಆಲೋಚಿಸಲೂ ಸಾಧ್ಯವಿಲ್ಲ. [23]ದಾವೀದನ ಜನನದ ಸುತ್ತ ಯಾವದೋ ಕಳಂಕ ಹತ್ತಿಕೊಂಡಿರುವ ಸಾಧ್ಯತೆ ಇದೆ. "ದಾವೀದ ಮತ್ತು ಅವನ ಕುಟುಂಬ" ಎಂಬ ಲೇಖನವನ್ನು ಈ ಪುಸ್ತಕದ ನಂತರದ ಭಾಗದಲ್ಲಿ ನೋಡಿರಿ. [24]ಕೆಲವೊಮ್ಮೆ ಕುರಿಗಳನ್ನು ತಮ್ಮ ಪಾಡಿಗೆ ತಾವಾಗಿಯೇ ಇರಿವಕ್ಕೆ ಬಿಡಲ್ಪಡಿತ್ತೆವೆ (ಹೋಲಿಸು ಲೂಕ 2:16; 15:4). [25]ಮೊದಲ ಶತಮಾನದ ಇತಿಹಾಸಕಾರ ಜೋಸೆಫನ್ ಬರೆಯುವಂತೆ, "... ಅವನು (ಸಮುವೇಲನು) ದಾವೀದನ

ಸಮ್ಮುಖದಲ್ಲಿಯೇ ಎಣ್ಣೆಯನ್ನು ತೆಗೆದುಕೊಂಡನು, ಅಭಿಷೇಕಿಸಿದನು ಮತ್ತು ಅವನ ಕಿವಿಗಳಲ್ಲಿ ಊಸುರಿದನು ಮತ್ತು ದೇವರು ಅವನನ್ನು ಅರಸನಾಗಿ ಆಯ್ಕೆ ಮಾಡಿದ್ದಾನೆಂದು ಅವನಿಗೆ ಮನವರಿಕೆ ಮಾಡಿದನು; ಮತ್ತು ನೀತಿವಂತನಾಗಿ ನಡೆಯುವಂತೆ ಎಚ್ಚರಿಸಿದನು ..." ಜೊಸೇಫಸ್, ಆನ್ಟಿಕಿಟಿಸ್ 6.8.1 (61-65). [26]ದೇವರಾತ್ಮನು ದಾವೀದನ ಮೇಲೆ ಬಂದಾಗ, ದೇವರ ಯೋಜನೆಯು ಅವನಿಗೆ ಪ್ರಕಟವಾ ಗಿರಬಹುದು. [27]ಅಂಥದೇ ಹೇಳಿಕೆಯು ಅನೇಕ ನ್ಯಾಯಸ್ಥಾಪಕರ ವಿಷಯದಲ್ಲಿದೆ. ಸಂಸೋನ, ಸೌಲ ಮತ್ತು ಇತರರನ್ನು ಒಳಗೊಂಡು (ನ್ಯಾಯಸ್ಥಾಪಕ 14:6, 19; 15:14), ಸೌಲ (1 ಸಮುವೇಲ 10:6, 10; 11:6), "ಆ ದಿನದಿಂದ" ಎಂಬ ವಾಕ್ಯವು ದೇವರಾತ್ಮನು ದಾವೀದನ ಮೇಲೆ ಇತರರಿಗಿಂತ ಶಾಶ್ವತವಾಗಿ ಬರುವದನ್ನು ಸೂಚಿಸಿತು. [28]ಅವರ ಹೃದಯಗಳಲ್ಲಿ ತಿರಸ್ಕಾರ ತುಂಬಿತ್ತು (1 ಸಮುವೇಲ 17:28). [29]ಈ ಉದಾಹರಣೆಗಳು ಅನೇಕ ಮೂಲಗಳಿಂದ ಪಡೆಯಲಾಗಿದೆ. [30]ಸೌಲನು ಸಮುವೇಲನಿಂದ ಅರಸನಾಗಿ ಅಭಿಷೇಕ ಹೊಂದಿದ ತರುವಾಯ (1 ಸಮುವೇಲ 10:1), ದೇವರಾತ್ಮನು ಅವನ ಮೇಲೆ ನೆಲೆಗೊಂಡನು (1 ಸಮುವೇಲ 10:10ff).

[31]ಯೋವೇಲ 2:13ನಲ್ಲಿ ಉಪಯೋಗಿಸಿದ ಇಬ್ರಿಯ ಪದಗಳು ಇಲ್ಲಿ ಉಪಯೋಗಿಸಲ್ಪಟ್ಟಿ ವೆ. ಅದು ದುಷ್ಟರಿಗೆ ದೊರಕುವ ದೇವರ ಶಿಕ್ಷೆಯ ಕುರಿತಾಗಿದೆ. ಇದೇ ಪದವನ್ನು ಯೋಹಾನ 3:10ರಲ್ಲಿ ಉಪಯೋಗಿಸಲಾಗಿದೆ. ಮತ್ತು NASB ಯಲ್ಲಿ "ಸಂಕಷ್ಟ" ಎಂದು ಭಾಷಾಂತರಿಸಲಾಗಿದೆ. [32]ಇಬ್ರಿಯ 12:5-11 ನೋಡಿರಿ. ಸೌಲನು ಅರಸನಾಗಿ ತಳ್ಳಲ್ಪಟ್ಟಿರಬಹುದು, ಆದರೆ ಇನ್ನೂ ರಕ್ಷಿಸಲ್ಪಡಬೇಕಾದ ಆತ್ಮವು ಅವನಲ್ಲಿತ್ತು. [33]William Congreve, as quoted in *Bartlett's Familiar Quotations,* 14th ed. (Boston: Little, Brown, and Co., 1968), 391. [34]ಹದಿನಾರನೇಯ ಅಧ್ಯಾಯದ ಕೊನೆಯಲ್ಲಿ, ಕಾಲಾನುಕ್ರಮದ ವಿಷಯದಲ್ಲಿ ಕೆಲವು ತೊಂದರೆ ಗಳಿದ್ದವು. ಹದಿನಾರನೇಯ ಅಧ್ಯಾಯದ ಕೊನೆಯ, ಸೌಲ ಮತ್ತು ದಾವೀದರ ಮಧ್ಯದ ಸಂಬಂಧದ ಕುರಿತು ಪ್ರಾರಂಭಿಕ ಹೇಳಕೆಯಾಗಿದೆ ಎಂದು ನಾವು ತಿಳುತೊಳ್ಳ ಬಹುದು. ಇದರ ವಿವರಣೆಯು ಇನ್ನೂ ಅನೇಕ ಅಧ್ಯಾಯಗಳಲ್ಲಿ ಕೊಡಲ್ಪಟ್ಟಿದೆ. ಇದು ಒಂದು ವೇಳೆ ಆಗಿದ್ದರೆ, ಈ ಘಟನೆಯ ಗೊಲ್ಯಾತನೊಡನೆಯ ಯುದ್ಧದ *ನಂತರ* ಅಧ್ಯಾಯ 17ರಲ್ಲಿ ನಡೆಯುತ್ತಿತ್ತು. ಒಂದುವೇಳೆ ಇದು ದಾವೀದನು ಗೋಲ್ಯಾತನನ್ನು ಸೋಲಿಸಿದ *ತರುವಾಯ* ಆಗಿದ್ದರೆ, "ಪರಾಕ್ರಮಶಾಲಿಯ" ಮತ್ತು "ಯೋಧನು" ಈ ಪದಗಳು, ಕಾಡು ಮೃಗಗಳಿಂದ ಮತ್ತು ಕಳ್ಳರಿಂದ ತನ್ನ ಕುರಿಗಳನ್ನು ರಕ್ಷಿಸುವ ದಾವೀದನ ಶೂರತನ ಇತರಿಗೆ ತಿಳಿದುಬರುತ್ತಿತ್ತು. [35]1 ಸಮುವೇಲ 16:21, 22 ಸೌಲನು ದಾವೀದನನ್ನು ತನ್ನ "ಯುದ್ಧ ಸಾಮಗ್ರಿಗಳನ್ನು" ಹೊರುವವನಾಗಿ ತನ್ನೊಡನೆ ಸದಾಕಾಲ ಇರುವದಕ್ಕೆ ತರುವದನ್ನು ಸೂಚಿಸುತ್ತದೆ. ಇದು 1 ಸಮುವೇಲ 18:2ನ್ನು ನಿರೀಕ್ಷಿಸುತ್ತದೆ. [36]2 ಸಮುವೇಲ 1 ಯೋನಾತಾನ ಮತ್ತು ಸೌಲರ ಕುರಿತ ದಾವೀದನ ಶೋಕಗೀತೆಯ "ಪ್ರಾಪಂಚಿಕ" ಕವನವಾಗಿದೆ. ಯಾಕೆಂದರೆ ಅದರಲ್ಲಿ ದೇವರ ಕುರಿತು ಏನೂ ಹೇಳಿಲ್ಲ. ಆದರೆ, ಎಸ್ತೇರಳ ಪುಸ್ತಕ ಅದು "ಪ್ರಾಪಂಚಿಕಕ್ಕಿಂತ" ಬಹು ದೂರವಾಗಿದೆ.